ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೭೭**

**ಪಟ್ಟಿ – ೧೪**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಗುರುವಾರ, ದಿನಾಂಕ : ೧೦ನೇ ಜುಲೈ, ೨೦೧೪**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

## ಕಾನೂನು ಪದವೀಧರರಿಗೆ ನೀಡುತ್ತಿರುವ ಸ್ಟೈಫಂಡ್

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೮೪೬ (೧೦೬೪) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಾನೂನು ಪದವಿಯನ್ನು ಪಡೆದಂತ ಪದವೀಧರರಿಗೆ ಸ್ಟೈಫಂಡ್ ಕೊಡುವ ಪದ್ಧತಿ ಯಾವ ದಿನಾಂಕದಂದು ಪ್ರಾರಂಭವಾಗಿದೆ ;

(ಆ) ಇಲ್ಲಿಯವರೆಗೆ ಈ ಪದ್ಧತಿಯ ಮೇರೆಗೆ ಎಷ್ಟು ಜನ ಕಾನೂನು ಪದವೀಧರರು ಸದರಿ ಸೌಲಭ್ಯವನ್ನು ಪಡೆಯುತ್ತಿದ್ದಾರೆ ; (ತಾಲ್ಲೂಕು/ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಇಲ್ಲಿಯವರೆಗೆ ಸರ್ಕಾರ ಪ್ರತಿ ವರ್ಷ ಎಷ್ಟು ಹಣ ಬಿಡುಗಡೆ ಮಾಡಿದೆ ಹಾಗೂ ಅನೇಕ ಜಿಲ್ಲೆಗಳಲ್ಲಿ ಸದರಿ ಪದವೀಧರರಿಗೆ ಹಣ ಬಿಡುಗಡೆಯಾಗದೆ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಕರ್ನಾಟಕ ರಾಜ್ಯ ಕುಕ್ಕುಟ ಅಭಿವೃದ್ಧಿ ಮಹಾಮಂಡಳದ ಕಾರ್ಯಚಟುವಟಿಕೆಗಳು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೮೪೭ (೧೦೬೬) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಕುಕ್ಕುಟ ಅಭಿವೃದ್ಧಿ ಮಹಾಮಂಡಳದ ಕೇಂದ್ರ ಕಛೇರಿ ಎಲ್ಲಿದೆ ;

(ಆ) ಈ ಮಹಾಮಂಡಳಕ್ಕೆ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನ ಎಷ್ಟು ;

(ಇ) ಈ ಕೇಂದ್ರದಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳಾವುವು ;

(ಈ) ಈ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಎಷ್ಟು ; ಅವರ ವೇತನಕ್ಕೆ ಖರ್ಚಾಗುವ ಅನುದಾನ ಎಷ್ಟು ;

(ಉ) ಈ ಕೇಂದ್ರದ ಕಛೇರಿ ಯಾವಾಗಲೂ ಬೀಗ ಮುದ್ರೆಗೆ ಒಳಗಾಗಿರುತ್ತವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಹಾಗಿದ್ದಲ್ಲಿ, ಈ ಕೇಂದ್ರದ ಸುಧಾರಣೆಗೆ ಕೈಗೊಳ್ಳಲಿರುವ ಕ್ರಮಗಳೇನು ?

## ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಹುದ್ದೆಗಳು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೮೪೮ (೧೦೬೮) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರೂವರೇ ವರ್ಷಗಳಲ್ಲಿ ಕರ್ನಾಟಕ ಹೈಕೋರ್ಟಿನ ವಕೀಲರ ಸಮುದಾಯದಿಂದ ಒಬ್ಬರನ್ನು ನ್ಯಾಯಾಧೀಶರ ಹುದ್ದೆಗೆ ನೇಮಿಸದೇ ಇರುವ ಸಂಗತಿ ನಿಜವೇ; ಹಾಗಿದ್ದಲ್ಲಿ, ನೇಮಿಸದೇ ಇರಲು ಕಾರಣಗಳು ಏನು ;

(ಆ) ರಾಜ್ಯ ಹೈಕೋರ್ಟ್ ನ್ಯಾಯಾಧೀಶರಾಗಲು ಅರ್ಹತೆ ಹೊಂದಿರುವ ವಕೀಲರ ಕೊರತೆ ಇದೆಯೇ ;

(ಇ) ಹೈಕೋರ್ಟಿನಲ್ಲಿ ಎಷ್ಟು ಜನ ನ್ಯಾಯಾಧೀಶರನ್ನು ನೇಮಿಸಲು ಅವಕಾಶವಿರುವುದು; ಈಗ ಹಾಲಿ ಎಷ್ಟು ಜನ ಇರುವರು ;

(ಈ) ಧಾರವಾಡ ಹಾಗೂ ಗುಲಬರ್ಗಾದಲ್ಲಿ ಹೈಕೋರ್ಟ್ ಖಾಯಂ ಪೀಠಗಳು ಆಗಿದ್ದರೂ ಕೂಡ ಅಲ್ಲಿಯೂ ಸಹ ನ್ಯಾಯಾಧೀಶರ ಕೊರತೆಗಳು ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬೆಳಗಾವಿ, ಧಾರವಾಡ, ಗುಲಬರ್ಗಾ, ಬಾರ್ ಅಸೋಸಿಯೇಷನ್ ಗಳಲ್ಲಿ ಸಹ ಹೈಕೋರ್ಟ್ ನ್ಯಾಯಾಧೀಶರಾಗುವ ಎಲ್ಲ ಅರ್ಹತೆಗಳನ್ನು ಪಡೆದಿದ್ದು, ಬೆಂಗಳೂರು ಹೊರತು ಪಡಿಸಿ ಬೇರೆ ವಕೀಲರನ್ನು ಸಹ ನೇಮಿಸಲು ಪರಿಶೀಲಿಸಲಾಗುವುದೇ ?

## ಶಿವಯೋಗಮಂದಿರದ ಪಶು ಆಸ್ಪತ್ರೆ ಮೇಲ್ದರ್ಜೆಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೮೪೯ (೧೦೬೯) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರ ಪಶು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಸಲುವಾಗಿ ಮಾನ್ಯ ಪಶು ಸಂಗೋಪನಾ ಸಚಿವರು ದಿನಾಂಕ:೧೦-೦೧-೨೦೧೪ ರಂದು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳುವ ಆದೇಶ ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಆಸ್ಪತ್ರೆ ಮಲಪ್ರಭಾ ಮುಳುಗಡೆ ಪ್ರದೇಶದಲ್ಲಿ ಬರುತ್ತಿದ್ದು, ಗ್ರಾಮೀಣ ಪ್ರದೇಶವಾಗಿದ್ದು, ಶಿವಯೋಗಮಂದಿರದ ಜಾನುವಾರುಗಳ ಅನುಕೂಲತೆಗಾಗಿ ಅತೀ ಅವಶ್ಯವಿರುವುದನ್ನು ಮನಗಂಡು ಮೇಲ್ದರ್ಜೆಗೇರಿಸಲು ಕೂಡಲೇ ಸರ್ಕಾರಿ ಆದೇಶ ಹೊರಡಿಸಲಾಗುವುದೆ ?

**ಸಚಿವಾಲಯದ ಇಲಾಖೆಗಳಲ್ಲಿ ಕಡತಗಳ ಬಾಕಿ**

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೮೫೦ (೧೦೬೭) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಚಿವಾಲಯದ ಇಲಾಖೆಗಳಲ್ಲಿ ಎಷ್ಟು ಕಡತಗಳು ಇತ್ಯರ್ಥಗೊಳ್ಳದೆ ಬಾಕಿ ಇರುತ್ತವೆ ; (ಇಲಾಖಾವಾರು ವಿವರ ನೀಡುವುದು) ;

(ಆ) ಸಚಿವಾಲಯದ ಮಟ್ಟದಲ್ಲಿ ಎಷ್ಟು ಇಲಾಖೆಗಳಿವೆ (ವಿವರ ಒದಗಿಸುವುದು) ;

(ಇ) ಅವುಗಳಲ್ಲಿ ಒಂದು ವರ್ಷಕ್ಕಿಂತ, ಎರಡು ವರ್ಷಕ್ಕಿಂತ, ಹಾಗೂ ಮೂರು ವರ್ಷಕ್ಕಿಂತ ಹೆಚ್ಚು ಅವಧಿಯ ಕಡತಗಳು ಯಾವ–ಯಾವ ಇಲಾಖೆಗಳಲ್ಲಿ ವಿಲೇವಾರಿಗಾಗಿ ಬಾಕಿ ಉಳಿದಿವೆ ;

(ಈ) ಶೀಘ್ರ ವಿಲೇವಾರಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು ?

## ಸ್ಮಾರ್ಟ್ ಸಿಟಿಯಾಗಿ ಬೆಳಗಾವಿ ನಗರ ಸೇರ್ಪಡೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :--**

೮೫೧ (೧೦೭೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧ ನಿರ್ಮಿಸಿ ಪ್ರತಿ ವರ್ಷ ವಿಧಾನ ಮಂಡಲದ ಅಧಿವೇಶನವನ್ನು ನಡೆಸುತ್ತಿರುವ ಸಂಗತಿ ನಿಜವೇ ;

(ಆ) ಬೆಳಗಾವಿಯು ಕಂದಾಯ, ಪೊಲೀಸ್, ನೀರಾವರಿ, ವಾಣಿಜ್ಯ, ಕೈಗಾರಿಕೆ ಮುಂತಾದ ಡಿವಿಜನಲ್ ಕಛೇರಿ ಹೊಂದಿದ ಹಾಗೂ ಪ್ರಮುಖ ಎಲ್ಲ ಇಲಾಖೆಗಳ ವಿಭಾಗ ಮಟ್ಟದ ಇಲಾಖಾ ಕಛೇರಿಗಳನ್ನು ಹೊಂದಿರುವ ಸಂಗತಿ ನಿಜವೇ ;

(ಇ) ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ಇರುವುದರಿಂದ, ದಿನೇ–ದಿನೇ ಹೆಚ್ಚಿನ ಬೆಳವಣಿಗೆ ಆಗುತ್ತಿರುವುದರಿಂದ ಕೇಂದ್ರ ಸರ್ಕಾರದವರು ನಿರ್ಮಿಸಬೇಕೆಂದಿರುವ ಸ್ಮಾರ್ಟ್ ಸಿಟಿ ಗಳಲ್ಲಿ ಒಂದಾಗಿ ಬೆಳಗಾವಿ ನಗರವನ್ನು ಸಹ ಸೇರಿಸಲು ಕೇಂದ್ರ ಸರ್ಕಾರಕ್ಕೆ ಕೋರಲಾಗುವುದೇ ?

## ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):–**

೮೫೨ (೧೦೭೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಇಲಾಖಾವಾರು, ಗ್ರೂಪ್ (ಎ.ಬಿ.ಸಿ.ಡಿ) ಹುದ್ದೆಗಳ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಮುಂದಿನ ೩ ವರ್ಷಗಳ ಅವಧಿಯಲ್ಲಿ ನಿವೃತ್ತರಾಗುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗಗಳ ಹುದ್ದೆಗಳ ಅಂದಾಜು ಸರ್ಕಾರಕ್ಕಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕುರಿತ ಮಾಹಿತಿ ಒದಗಿಸುವುದು ;

(ಇ) ಶ್ರೀಸಾಮಾನ್ಯರ ದೈನಂದಿನ ಸರ್ಕಾರಿ ಕೆಲಸಗಳನ್ನು ಸುಗಮಗೊಳಿಸಲು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗೊಳಿಸುವ ಮತ್ತು ಖಾಲಿಯಿರುವ ಹುದ್ದೆಗಳನ್ನು ತುಂಬುವ ನಿಟ್ಟಿನಲ್ಲಿ ಸರ್ಕಾರ ಗಂಭೀರವಾಗಿ ಆಲೋಚಿಸಿದೆಯೇ ; ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ;

(ಈ) ಕೆಲವು ಇಲಾಖೆಗಳನ್ನು ವಿಲೀನಗೊಳಿಸುವ ಮತ್ತು ಹೆಚ್ಚುವರಿಯಂತಹ ಹುದ್ದೆಗಳನ್ನು ರದ್ದು ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಅಂತಹ ಇಲಾಖೆಗಳು ಮತ್ತು ಹೆಚ್ಚುವರಿ ಹುದ್ದೆಗಳನ್ನು ಗುರುತಿಸಲಾಗಿದೆಯೇ; (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಉ) ನಿಗದಿತ ವಿದ್ಯಾರ್ಹತೆಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ, ೧೫ ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವಂತಹ ಸಿಬ್ಬಂದಿಗಳನ್ನು ಉನ್ನತ ಹುದ್ದೆಗಳಿಗೆ ಬಡ್ತಿ ನೀಡುವಂತಹ ಆಲೋಚನೆ ಇದೆಯೇ? (ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು) ;

## ಬೆಂಗಳೂರು ನಗರದಲ್ಲಿ ಅಕ್ರಮ ಒತ್ತುವರಿ ಜಾಗ

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):–**

೮೫೩ (೧೦೭೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶ್ರೀ ಎ.ಟಿ. ರಾಮಸ್ವಾಮಿರವರ ನೇತೃತ್ವದಲ್ಲಿನ ಸದನ ಸಮಿತಿ ಗುರುತಿಸಿದಂತೆ ಬೆಂಗಳೂರು ನಗರದಲ್ಲಿ ಅಕ್ರಮವಾಗಿ ಒತ್ತುವರಿಯಾದ ಸರ್ಕಾರಿ ಜಾಗ ಎಷ್ಟು ; (ಪ್ರದೇಶವಾರು ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಆ) ಸರ್ಕಾರ ವಶಪಡಿಸಿಕೊಂಡ ಈ ಅಕ್ರಮ ಒತ್ತುವರಿ ಜಾಗದಲ್ಲಿ, ಎಷ್ಟು ಪ್ರಮಾಣದ ಭೂಮಿಯನ್ನು ಬಿ.ಡಿ.ಎ.ಗೆ ವಹಿಸಿಕೊಡಲಾಗಿದೆ; ನೀಡಲಾದ ಸಂದರ್ಭದಲ್ಲಿ ಸರ್ಕಾರವು ಅನುಸರಿಸಿದ ಮಾನದಂಡವೇನು; ಯಾವ ಉದ್ದೇಶಗಳ ಬಳಕೆಗಾಗಿ ನೀಡಲಾಗಿತ್ತು ;

(ಇ) ಪ್ರಸ್ತುತ ಬಿ.ಡಿ.ಎ.ಯು ಕಡಿಮೆ ದರದಲ್ಲಿ ದೊರಕಿದ ಜಾಗದಲ್ಲಿ ಜನಸಾಮಾನ್ಯರ ಕೈಗೆಟುಕದ, ರೀತಿ ಬೆಲೆ ನಿಗದಿ ಮಾಡಿ, ಕೇವಲ ಲಾಭದಾಯಕ ವಸತಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ನಿಜವೇ ? (ಹಾಗಿದ್ದಲ್ಲಿ, ಸಾವಿರಾರು ಫ್ಲಾಟ್‌ಗಳ ನಿರ್ಮಾಣ, ಅವುಗಳಿಗೆ ವಿಧಿಸಲಾಗುವ ಬೆಲೆ ಕುರಿತಾದ ಸಂಪೂರ್ಣ ಮಾಹಿತಿ ಒದಗಿಸುವುದು) ;

## ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಹಸಿರು ವಲಯಗಳು

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):–**

೮೫೪ (೧೦೭೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಹಸಿರು ವಲಯವ್ಯಾಪ್ತಿಯೆಂದು ಗುರುತಿಸಿರುವ ಪ್ರದೇಶಗಳು ಯಾವುವು; ಪ್ರಸ್ತುತ ಅವುಗಳ ವಿಸ್ತೀರ್ಣ ಎಷ್ಟು; (ಮಾಹಿತಿ ಒದಗಿಸುವುದು) ;

(ಆ) ಈ ಹಸಿರು ವಲಯ ವ್ಯಾಪ್ತಿ ಪ್ರದೇಶದಲ್ಲಿ ಅಕ್ರಮವಾಗಿ ವಸತಿ ಮತ್ತು ಇತರೆ ಉದ್ದೇಶಗಳಿಗೆ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇಂತಹ ಕಾಮಗಾರಿಗಳು ಯಾವುವು; ನಿರ್ಮಾಣ ಮಾಡುತ್ತಿರುವ ವ್ಯಕ್ತಿ ಮತ್ತು ಸಂಸ್ಥೆಗಳು ಯಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ನಗರದ ಹೊಸಕೆರೆಹಳ್ಳಿಯ ಇಟ್ಟಮಡು ಹತ್ತಿರದ ಹನುಮಗಿರಿ ಗುಡ್ಡದಲ್ಲಿ ನಿಯಮಾವಳಿಗಳನ್ನು ತಿರುಚಿ ಖಾಸಗಿ ಸಂಸ್ಥೆಯೊಂದು ಬೃಹತ್ ಪ್ರಮಾಣದ ವಸತಿ ಸಂಕೀರ್ಣವನ್ನು ನಿರ್ಮಾಣ ಮಾಡುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಆ ಸಂಸ್ಥೆ ಯಾವುದು ; ಕಾಮಗಾರಿಗೆ ಅನುಮತಿಸಲು ಅನುಸರಿಸಿದ ಮಾನದಂಡ ಮತ್ತು ಮಾರ್ಗ ಸೂಚಿಗಳು ಯಾವುವು ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

## ಬಿ.ಬಿ.ಎಂ.ಪಿ ಆಚರಿಸುವ ಜಯಂತಿ, ಉತ್ಸವಗಳು

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):-**

೮೫೫ (೧೦೭೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಆಚರಿಸಲಾಗುವ ಜಯಂತಿ, ಉತ್ಸವ, ದಿನಾಚರಣೆಗಳು ಯಾವುವು; ಯಾವ ದಿನಾಂಕಗಳಂದು, ಯಾವ ಉದ್ದೇಶಗಳಿಗಾಗಿ ಈ ಆಚರಣೆಗಳನ್ನು ಹಮ್ಮಿಕೊಳ್ಳಲಾಗುತ್ತದೆ; (ವಿವರ ಒದಗಿಸುವುದು)

(ಆ) ಈ ಆಚರಣೆಗಳನ್ನು ನಡೆಸುವ ಸಲುವಾಗಿ ಒದಗಿಸಲಾಗುತ್ತಿರುವ ಅನುದಾನ ಎಷ್ಟು; ಪಾಲಿಕೆ ಮತ್ತು ಸರ್ಕಾರದ ವಿಶೇಷ ಅನುದಾನ(ಇದ್ದಲ್ಲಿ)ಗಳ ಪ್ರತ್ಯೇಕವಾದ ಸಂಪೂರ್ಣ ಮಾಹಿತಿ ಒದಗಿಸುವುದು ;

(ಇ) ಕೆಲವು ಆಚರಣೆಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಇರದೇ, ಪಾಲಿಕೆಗೆ ಹೊರೆಯಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದೇಣಿಗೆ ನೀಡುವ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೮೫೬ (೧೧೦೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ೨೦೧೧ರಿಂದ ಇತ್ತೀಚಿನವರೆಗೂ ದೇಣಿಗೆ ನೀಡಲು ಮೀಸಲಿಟ್ಟಿರುವ ಹಣ ಎಷ್ಟು; ದೇಣೀಗೆಯನ್ನು ಯಾರ್ಯಾರಿಗೆ ನೀಡಲು ಅವಕಾಶವಿದೆ; ಈ

ಹಣ ನೀಡಲು ಯಾವ ಕಾಯ್ದೆಯನ್ನು ಬಳಕೆ ಮಾಡಲಾಗಿದೆ; ದೇಣಿಗೆ ನೀಡಲು ಅಂತಿಮ ತೀರ್ಮಾನವನ್ನು ಯಾರು ತೆಗೆದುಕೊಳ್ಳುತ್ತಾರೆ ;

(ಆ) ೨೦೧೦ ರಿಂದೀಚೆಗೆ ಯಾವ ಯಾವ ಆಯುಕ್ತರ ಅವಧಿಯಲ್ಲಿ ಎಷ್ಟೆಷ್ಟು ಹಣಕ್ಕೆ ಕೋರಿಕೆ ಸಲ್ಲಿಸಿದ್ದು, ಪ್ರಾಧಿಕಾರದಿಂದ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ; ಕೋರಿಕೆ ಹಣಕ್ಕಿಂತ ಹೆಚ್ಚಿನ ಹಣವನ್ನು ಮಂಜೂರು ಮಾಡಿರುವುದು ನಿಜವೇ ; ಹೌದಾದಲ್ಲಿ ಇದಕ್ಕೆ ಕಾರಣವೇನು ;

(ಇ) ಈ ದೇಣಿಗೆ ಹಣ ಮಂಜೂರಾತಿಗೆ ಎ.ಜಿ. ರವರು ಆಕ್ಷೇಪಣೆ ವ್ಯಕ್ತಪಡಿಸಿರುವುದು ನಿಜವೇ; ಹೌದಾದಲ್ಲಿ, ಆಕ್ಷೇಪಣೆ ವ್ಯಕ್ತಪಡಿಸಿರುವ ಪ್ರತಿ ನೀಡುವುದು; ಇದಕ್ಕೆ ಬದ್ಧರಾಗಿ ಪ್ರಾಧಿಕಾರವು ಕೈಗೊಂಡ ಕ್ರಮಗಳ ವಿವರ ನೀಡುವುದು ;

(ಈ) ದೇಣಿಗೆ ಪಡೆದವರೆಲ್ಲರೂ ಕರ್ನಾಟಕ ಆರ್ಥಿಕ ಸಂಹಿತೆ (ಕೆಎಫ್‌ಸಿ)ಯ ನಿಯಮಗಳಂತೆ ನೋಂದಾವಣೆ ದಾಖಲೆ, ಹಿಂದಿನ ವರ್ಷಗಳ ಆದಾಯ ವೆಚ್ಚ, ಹಿಂದಿನ ವರ್ಷಗಳ ಲೆಕ್ಕ ಪರಿಶೋಧಕರ ವರದಿ ಮತ್ತು ದೇಣಿಗೆ ಹಣ ಉಪಯೋಗಿಸಿದ ಪತ್ರಗಳನ್ನು ಪಡೆಯಲಾಗಿದೆಯೇ ; ಇಲ್ಲವಾದಲ್ಲಿ, ಕಾರಣವೇನು; ಇದರ ಬಗ್ಗೆ ಪ್ರಾಧಿಕಾರವು ಕೈಗೊಂಡ ಕ್ರಮಗಳು ಹಾಗೂ ಮಂಜೂರಾತಿ ಮಾಡಿದವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು ;

(ಉ) ೮೦ಜಿ ಪ್ರಮಾಣ ಪತ್ರ ಹೊಂದಿಲ್ಲದವರಿಗೆ ದೇಣಿಗೆ ನೀಡಿರುವುದು ನಿಜವೇ ; ೨೦೦೯-೧೦ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸರ್ಕಾರದ ಅನುಮತಿ ಪಡೆಯದೇ ಬಿಡಿಎ ಧಾರಾಳವಾಗಿ ವಂತಿಕೆ ಪಾವತಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುವುದು ನಿಜವೇ ; ಹೌದಾದಲ್ಲಿ, ತದನಂತರವೂ ದೇಣಿಗೆ ನೀಡುತ್ತಾ ಬಂದಿರುವುದು ನಿಜವೇ ;

(ಊ) ೨೦೧೦ ರಿಂದೀಚೆಗೆ ಪ್ರಾಧಿಕಾರದ ಹಣವನ್ನು ಇಚ್ಛಾನುಸಾರ ದೇಣಿಗೆ ನೀಡಲು ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೇ ; ಇಲ್ಲವಾದಲ್ಲಿ, ಇನ್ನಾದರೂ ಕ್ರಮ ಕೈಗೊಳ್ಳಲಾಗುವುದೇ (ಈ ದೇಣಿಗೆ ಪ್ರತೀತಿಯನ್ನು ನಿಲ್ಲಿಸಲು ತೆಗೆದುಕೊಳ್ಳಲಾಗುವ ಕ್ರಮಗಳೇನು ಎಂಬ ಬಗ್ಗೆ ಸಂಪೂರ್ಣ ವಿವರಗಳನ್ನು ಒದಗಿಸುವುದು) ?

## ಮಹಾನಗರ ಪಾಲಿಕೆಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೮೫೭ (೧೦೭೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ದರ್ಜೆಯ ಉದ್ಯೋಗಿಗಳ (ದರ್ಜೆವಾರು) ವಿವರ ನೀಡುವುದು ; ವಿವಿಧ ನಮೂನೆಯ ವಾಹನಗಳ ವಿವರ ನೀಡುವುದು ;

(ಆ) ಪ್ರತಿಯೊಂದು ನಗರ ಪಾಲಿಕೆಯ ಪ್ರತಿ ವರ್ಷದ ನೌಕರರ ಸಂಬಳ, ಭತ್ಯೆ, ಪ್ರವಾಸ ಭತ್ಯೆ, ಸಾದಿಲ್ವಾರು ಮುಂತಾದ ವಾರ್ಷಿಕ ವೆಚ್ಚದ ವಿವರ ನೀಡುವುದು;

(ಇ) ಈ ಪ್ರತಿಯೊಂದು ಮಹಾನಗರ ಪಾಲಿಕೆಯು ರಾಜ್ಯ ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ಇತರ ಸ್ವಾಯತ್ತ ಆರ್ಥಿಕ ಸಂಸ್ಥೆಗಳಿಂದ ಪಡೆದಿರುವ ಸಾಲದ ಮೊತ್ತದ ವಿವರವನ್ನು ನೀಡುವುದು ಮತ್ತು ಇವುಗಳಿಗೆ ಸಂದಾಯ ಮಾಡುತ್ತಿರುವ ಬಡ್ಡಿಯ ವಿವರಗಳನ್ನು ನೀಡುವುದು ;

(ಈ) ಈ ಎಲ್ಲ ಮಹಾನಗರ ಪಾಲಿಕೆಗಳಿಗೆ ಸಂದಾಯವಾಗುತ್ತಿರುವ ಆಸ್ತಿ ಶುಲ್ಕ, ನೀರಿನ ಶುಲ್ಕ, ನಕ್ಷೆ ಮಂಜೂರಾತಿ, ವಾಣಿಜ್ಯ ಪರವಾಗಿ, ಮುಂತಾದ ಬಾಬ್ತಿನಲ್ಲಿ ಸಂದಾಯವಾಗುತ್ತಿರುವ ಆದಾಯ ಮೊತ್ತವನ್ನು ನೀಡುವುದು; ಅಲ್ಲದೇ ಈ ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿಯೂ ಕಾಮಗಾರಿಗಳಿಗೆ ನೀಡಬೇಕಾಗಿರುವ ಬಾಕಿ ಮೊತ್ತವೆಷ್ಟು ? (ವಿವರಗಳನ್ನು ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೮೫೮ (೧೦೭೬) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯಾದ್ಯಂತ ವಿವಿಧ ನಗರಾಭಿವೃದ್ಧಿ ಪ್ರಾಧಿಕಾರಿಗಳು ಕಳೆದ ೫ ವರ್ಷಗಳಲ್ಲಿ ನಿವೇಶನಕ್ಕಾಗಿ ವಶಪಡಿಸಿಕೊಂಡಿರುವ ಜಮೀನಿನ ವಿವರ ನೀಡುವುದು ;

(ಆ) ಕಳೆದ ೫ ವರ್ಷಗಳಲ್ಲಿ ಈ ನಗರಾಭಿವೃದ್ಧಿ ಪ್ರಾಧಿಕಾರಿಗಳು ವಿತರಣೆ ಮಾಡಿರುವ ವಿವಿಧ ಅಳತೆಯ ನಿವೇಶನಗಳ ವಿವರ ನೀಡುವುದು ;

(ಇ) ಪ್ರತಿಯೊಂದು ನಗರಾಭಿವೃದ್ಧಿ ಪ್ರಾಧಿಕಾರಕ್ಕೂ ಸಿಬ್ಬಂದಿ ವೇತನ, ಪ್ರವಾಸ ಭತ್ಯೆ ಮತ್ತು ಸಾದಿಲ್ವಾರು ಇತ್ಯಾದಿ ಒಟ್ಟಾರೆ ಖರ್ಚಾಗುತ್ತಿರುವ ಹಣದ ವಿವರ ನೀಡುವುದು ಹಾಗೂ ಅವುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳು ಹಾಗೂ ಪ್ರಾಧಿಕಾರದಲ್ಲಿ ಉಪಯೋಗಿಸುತ್ತಿರುವ ವಾಹನಗಳ ಸಂಖ್ಯೆಗಳನ್ನು ನೀಡುವುದು (ಪ್ರಾಧಿಕಾರವಾರು ವಿವರ ನೀಡುವುದು) ;

(ಈ) ಈ ಪ್ರಾಧಿಕಾರ ಉದ್ಯೋಗಿಗಳ ಪರಸ್ಪರ ವರ್ಗಾವಣೆಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತರುವ ವಿಚಾರ ಸರ್ಕಾರದ ಮುಂದಿದೆಯೇ ?

## ರೌಡಿ ಶೀಟರ್ಸ್‌ಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

ಅರ್ಜಿ (೧೦೭೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯಾದ್ಯಂತ ಕಳೆದ ಒಂದು ವರ್ಷದಲ್ಲಿ ಎಷ್ಟು ಜನರನ್ನು ರೌಡಿಶೀಟ್‌ಗೆ ಸೇರಿಸಲಾಗಿದೆ ; (ಪ್ರತಿಯೊಬ್ಬರ ಹೆಸರು, ವಯಸ್ಸು, ವಿಳಾಸ ಅವರ ಮೇಲಿನ ಆರೋಪ, ಮುಂತಾದ ವಿವರಗಳನ್ನು ಜಿಲ್ಲಾವಾರು ನೀಡುವುದು) ;

(ಆ) ಕಳೆದ ಒಂದು ವರ್ಷದಲ್ಲಿ ಎಷ್ಟು ಜನರನ್ನು ರೌಡಿಶೀಟರ್ ಪಟ್ಟಿಯಿಂದ ಕೈಬಿಡಲಾಗಿದೆ ? (ಪ್ರತಿಯೊಬ್ಬರ ಹೆಸರು, ವಯಸ್ಸು, ವಿಳಾಸ ಮತ್ತು ಕೈಬಿಡಲು ಕಾರಣಗಳು ಮುಂತಾದ ವಿವರಗಳನ್ನು ಜಿಲ್ಲಾವಾರು ನೀಡುವುದು) ;

## ದಿನಗೂಲಿ ನೌಕರರ ಸೇವಾ ಭದ್ರತೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೮೬೦ (೧೦೭೮) ಮಾನ್ಯ ಮುಖ್ಯಮಂತ್ರಿಯವರು ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಿಂದಿನ ಸರ್ಕಾರ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರಿಗೆ ಸೇವಾ ಭದ್ರತೆ ನೀಡುವ ಅಧಿನಿಯಮವನ್ನು ಜಾರಿಗೆ ತಂದಿದ್ದು, ಇವರ ಪ್ರಮುಖಾಂಶಗಳೇನು ;

(ಆ) ಹಾಲಿ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ; (ಇಲಾಖಾವಾರು, ಹುದ್ದೆವಾರು ವಿವರ ನೀಡುವುದು)

(ಇ) ಈ ಅಧಿನಿಯಮವನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಜಾರಿಗೊಳಿಸಲಾಗಿದೆಯೇ ; ಇಲ್ಲದಿದ್ದರೆ ಕಾರಣವೇನು ?

## ದೇವಸ್ಥಾನಗಳ ಅಭಿವೃದ್ಧಿ ಅನುದಾನ

**ಶ್ರೀ ಸೋಮಣ್ಣ. ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೬೧ (೧೦೭೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ವರ್ಷ ಮೇ ೨೦೧೩ ರಿಂದ ಇಲ್ಲಿಯವರೆಗೆ ಮುಜರಾಯಿ ಇಲಾಖೆಯಿಂದ ಹಾವೇರಿ ಜಿಲ್ಲೆಯ ದೇವಸ್ಥಾನಗಳ ಅಭಿವೃದ್ಧಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇದೇ ಅವಧಿಯಲ್ಲಿ ಸದರಿ ಜಿಲ್ಲೆಯಲ್ಲಿ ಎಷ್ಟು ದೇವಸ್ಥಾನಗಳನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಳ್ಳಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಮೇಲ್ಕಂಡ ಅವಧಿಯಲ್ಲಿ ಜಿಲ್ಲೆಯ ಎಷ್ಟು ದೇವಸ್ಥಾನಗಳನ್ನು ಜೀರ್ಣೋದ್ಧಾರಗೊಳಿಸಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಜಲ ಮಂಡಳಿಯ ವಿಳಂಬ ಧೋರಣೆ

**ಶ್ರೀ ಸೋಮಣ್ಣ. ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೮೬೨ (೧೧೫೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಯಲಹಂಕ ಉಪನಗರ ಮನೆ ಸಂಖ್ಯೆ ೧೦೦೧ ರಂದ ೧೦೪೫ರವರಗಿನ ಇಡಬ್ಲೂಎಸ್, ೨ನೇ ಹಂತ, ೫ ಮೀಟರ್ ವೈಡ್ ರಸ್ತೆ, ೨ನೇ ಕ್ರಾಸ್, ರಸ್ತೆಯಲ್ಲಿರುವ ಒಳಚರಂಡಿ ಪೈಪುಗಳು ೩೦ ವರ್ಷ ಹಳೆಯದಾಗಿರುವುದರಿಂದ ಅವು ಒಡೆದು ಹೋಗಿ ಪ್ರತಿ ನಿತ್ಯ ನೀರು ಹೊರ ಬಂದು ರಸ್ತೆಯೆಲ್ಲ ದುರ್ವಾಸನೆಯಿಂದ ಕೂಡಿ ಆ ಭಾಗದ ವಾತಾವರಣ ಮಲೀನವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಲ್ಲಿನ ನಾಗರೀಕರು ಸಹಾಯಕ ಕಾರ್ಯಪಾಲಕ ಅಭಿಯಂತರು, ಬೆಂಗಳೂರು ಜಲ ಮಂಡಳಿ, ಯಲಹಂಕ ಇವರಿಗೆ ಮನವಿ ಸಲ್ಲಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ ;

(ಇ) ಸದರಿ ಮನವಿ ಈಗ ಯಾವ ಹಂತದಲ್ಲಿದೆ ;

(ಈ) ಈ ರಸ್ತೆ ಒಳಚರಂಡಿ ಪೈಪುಗಳನ್ನು ಎಷ್ಟು ದಿನದಲ್ಲಿ ಬದಲಾಯಿಸಲು ಸರ್ಕಾರ ಕ್ರಮ ಜರುಗಿಸುವುದು ?

## "ಜ್ಯೋತಿ ಸಂಜೀವಿನಿ" ಯೋಜನೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೮೬೩ (೧೦೮೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ಜ್ಯೋತಿ ಸಂಜೀವಿನಿ" ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆಯೇ ; ಈ ಯೋಜನೆಯ ವಿವರಗಳೇನು ;

(ಆ) ಈ ಯೋಜನೆಯಡಿ ಅನುದಾನಿತ ಹಾಗೂ ಅನುದಾನರಹಿತ ಶಿಕ್ಷಕರನ್ನು ಸೇರ್ಪಡಿಸಲಾಗಿದೆಯೇ ?

## ಪಶುಸಂಗೋಪನಾ ಶಸ್ತ್ರ ಚಿಕಿತ್ಸಾ ತಜ್ಞರು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೬೪ (೧೦೮೫) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯು ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯುಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಜ್ಞ ಶಸ್ತ್ರಚಿಕಿತ್ಸಾ ಪಶುವೈದ್ಯರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

92378-3

(ಆ) ಇಲಾಖೆಯಲ್ಲಿ ತಜ್ಞ ಶಸ್ತ್ರಚಿಕಿತ್ಸಾ ಪಶುವೈದ್ಯರುಗಳ ಕೊರತೆಯಿದ್ದಲ್ಲಿ, ಆ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು ?

## ನಕ್ಸಲ್ ಪ್ರಭಾವಿತ ಗ್ರಾಮಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೬೫ (೧೦೮೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ನಕ್ಸಲ್ ಪ್ರಭಾವಿತ ಗ್ರಾಮಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಪೊಲೀಸ್ ಇಲಾಖೆಯಿಂದ ಬಂದ ಮಾಹಿತಿಗಳ ಆಧಾರದಲ್ಲಿ ಜಿಲ್ಲೆಗಳಲ್ಲಿನ ನಕ್ಸಲ್ ಪ್ರಭಾವಿತ ಗ್ರಾಮಗಳ ಮೂಲಭೂತ ಬೇಡಿಕೆಗಳಾವುವು ; ಅವುಗಳನ್ನು ಬಗೆಹರಿಸಲು ಪೊಲೀಸ್ ಇಲಾಖೆಯಿಂದ ತೆಗೆದುಕೊಳ್ಳಲಾದ ಕ್ರಮಗಳೇನು ;

(ಇ) ಸದರಿ ಜಿಲ್ಲೆಗಳಲ್ಲಿನ ನಕ್ಸಲ್ ಪ್ರಭಾವಿತ ಗ್ರಾಮಗಳ ಮೇಲೆ ಕಸ್ತೂರಿರಂಗನ್ ವರದಿಯು ಪ್ರಭಾವ ಬೀರುವುದೇ ; ಪ್ರಭಾವ ಬೀರಿದಲ್ಲಿ ಸರ್ಕಾರದ ನಿಲುವೇನು ?

## ಉಡುಪಿ ಜಿಲ್ಲೆಯಲ್ಲಿ ದಾಖಲಾದ ಕೊಲೆ, ಸುಲಿಗೆ ಪ್ರಕರಣಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೬೬ (೧೦೮೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಕೊಲೆ, ಸುಲಿಗೆ ದರೋಡೆ ಹಾಗೂ ಕಳುವಿನ ಪ್ರಕರಣಗಳೆಷ್ಟು ; ಇವುಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು (ವರ್ಷವಾರು, ಠಾಣಾವಾರು, ಪ್ರಕರಣವಾರು ವಿವರ ನೀಡುವುದು) ;

(ಆ) ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದೇವಸ್ಥಾನ, ದೇವಸ್ಥಾನಗಳಲ್ಲಿ ಆದ ಕಳುವಿನ ಕುರಿತು ದಾಖಲಾದ ಪ್ರಕರಣಗಳೆಷ್ಟು ; ಇವುಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು (ವರ್ಷವಾರು, ಪ್ರಕರಣವಾರು ವಿವರ ನೀಡುವುದು) ;

(ಇ) ಅಪರಾಧ ಪ್ರಕರಣಗಳನ್ನು ಅತ್ಯುನ್ನತ ತಂತ್ರಜ್ಞಾನ ಬಳಸಿ ಅಥವಾ ವಿಶೇಷ ತನಿಖಾ ತಂಡವನ್ನು ರಚಿಸಿ ಅಪರಾಧಿಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲವೇ ; ಅಥವಾ ಪ್ರತಿ ಪೊಲೀಸ್ ಠಾಣೆಗಳಿಂದ ಬೇರೆ-ಬೇರೆ ಠಾಣೆಗಳಿಗೆ ನಿಯುಕ್ತಿ ಮಾಡುವ ಪೊಲೀಸರನ್ನು ಬಳಸಿ ವಿಶೇಷ ತನಿಖಾ ತಂಡವನ್ನು ರಚಿಸಲು ಸಾಧ್ಯವಿಲ್ಲವೆ ?

## ನೂತನ ನ್ಯಾಯಾಲಯ ಸಂಕೀರ್ಣಗಳಲ್ಲಿನ ನ್ಯೂನತೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೬೭ (೧೦೮೩) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನೂತನ ನ್ಯಾಯಾಲಯಗಳ ಸಂಕೀರ್ಣಗಳನ್ನು ನಿರ್ಮಿಸುವಾಗ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಸರಕಾರಿ ಅಭಿಯೋಜಕರುಗಳಿಗೆ ಪ್ರತ್ಯೇಕ ಕಛೇರಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರ ಗಮನಿಸಿದೆಯೇ ;

(ಆ) ನೂತನ ನ್ಯಾಯಾಲಯಗಳ ಸಂಕೀರ್ಣಗಳನ್ನು ನಿರ್ಮಿಸುವಾಗ ಮಹಿಳಾ ಹಾಗೂ ಪುರುಷ ವಕೀಲರುಗಳಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು ಸರ್ಕಾರ ಗಮನಿಸಿದೆಯೇ ;

(ಇ) ರಾಜ್ಯದಲ್ಲಿ ನೂತನ ನ್ಯಾಯಾಲಯಗಳ ಸಂಕೀರ್ಣಗಳನ್ನು ನಿರ್ಮಿಸುವಾಗ ಸಾಕ್ಷಿದಾರರಿಗೆ ಕುಳಿತುಕೊಳ್ಳಲು ಸರಿಯಾದ ವ್ಯವಸ್ಥೆ ಇಲ್ಲದಿರುವುದು, ಸೂಕ್ತ ಶೌಚಾಲಯ ವ್ಯವಸ್ಥೆ ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಈ) ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವ ನೂತನ ನ್ಯಾಯಾಲಯಗಳ ಸಂಕೀರ್ಣಗಳಲ್ಲಿ ಮೇಲಿನ ಎಲ್ಲಾ ಅಂಶಗಳನ್ನು ಸರಕಾರ ಗಮನಿಸಿದ್ದಲ್ಲಿ, ಅದನ್ನು ಸರಿಪಡಿಸಲಾಗುವುದೇ; ಇಲ್ಲವಾದಲ್ಲಿ ಕಾರಣವೇನು ?

## ಶ್ರೀ ಗವೀರಂಗನಾಥಸ್ವಾಮಿ ದೇವಸ್ಥಾನ ನಿರ್ವಹಣೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೮೬೮ (೧೧೪೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಗವೀರಂಗಾಪುರದಲ್ಲಿರುವ ಶ್ರೀ ಗವೀರಂಗನಾಥ ಸ್ವಾಮಿ ದೇವಸ್ಥಾನದ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಆ) ಈ ದೇವಸ್ಥಾನದಲ್ಲಿ ಪೂಜಾ ವೇಳೆ ನಿಗದಿ ಮಾಡಲಾಗಿದೆಯೇ ; ವೇಳಾಪಟ್ಟಿ ಪ್ರಕಟಿಸಲಾಗಿದೆಯೇ ;

(ಇ) ಇಲ್ಲಿ ಇದುವರೆವಿಗೂ ಕಮಿಟಿ ರಚನೆ ಮಾಡದಿರಲು ಕಾರಣವೇನು ; ಅಥವಾ ಆಡಳಿತಾಧಿಕಾರಿ ನೇಮಕ ಮಾಡದಿರಲು ಕಾರಣವೇನು ; ನಿರ್ವಹಣೆ ಯಾರು ಮಾಡುತ್ತಿದ್ದಾರೆ ; ನೀರಿಲ್ಲದೆ ಅನೇಕ ದಿನ ಪೂಜೆ ನಿಂತಿರುವುದು ನಿಜವೇ ;

(ಈ) ಬಂದಂತಹ ಭಕ್ತಾದಿಗಳಿಗೆ ಅಲ್ಲಿ ಸ್ವಚ್ಛತೆ, ಅನುಕೂಲ, ಕುಡಿಯುವ ನೀರಿಲ್ಲದೆ ಪರದಾಡುವುದು ಗಮನಕ್ಕೆ ಬಂದಿದೆಯೇ ;

(ಉ) ಕಳೆದ ಐದು ವರ್ಷದಲ್ಲಿ ವರ್ಷಾವಾರು ಆದಾಯ ಎಷ್ಟು ಬಂದಿದೆ; ಮಾಡಲಾದ ಖರ್ಚು ಎಷ್ಟು (ಪೂರ್ಣ ವಿವರ ನೀಡುವುದು, ಸಿಬ್ಬಂದಿಗಳ ಬಗ್ಗೆ ವಿವರ ನೀಡುವುದು) ;

(ಊ) ಅವ್ಯವಸ್ಥೆಯಿಂದ ಕೂಡಿರುವ ಈ ಪುಣ್ಯಕ್ಷೇತ್ರವನ್ನು ಕೂಡಲೇ ಸರಿಪಡಿಸಲಾಗುವುದೇ ?

## ಕಲ್ಲುಗಣಿ ಗುತ್ತಿಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :--**

೮೬೯ (೧೧೪೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕಲ್ಲುಗಣಿ ಗುತ್ತಿಗೆಗಳ ಸಂಖ್ಯೆ ಎಷ್ಟು; ಅವು ಯಾವುವು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಕಳೆದ ಐದು ವರ್ಷದಲ್ಲಿ ಈ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ;

(ಇ) ಕಲ್ಲುಗಣಿ ಗುತ್ತಿಗೆ ನೀಡಲು ಇರುವ ಮಾನದಂಡವೇನು ;

(ಈ) ಸರ್ಕಾರ ನೀಡಿದ ಅವಧಿ ಮುಗಿದ ನಂತರವೂ ನಿರತರಾಗಿರುವ ಕಲ್ಲುಗಣಿ ಗುತ್ತಿಗೆದಾರರ ವಿರುದ್ಧ ತೆಗೆದುಕೊಳ್ಳಲಾದ ಕ್ರಮಗಳೇನು ;

(ಉ) ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು ?

## ಕರ್ನಾಟಕ ರಾಜ್ಯ ಛತ್ರದ ಕಟ್ಟಡ ನಿರ್ಮಾಣ ಸ್ಥಗಿತಗೊಂಡಿರುವುದು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೮೭೦ (೧೦೮೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಂಧ್ರಪ್ರದೇಶದ ತಿರುಮಲ ಬೆಟ್ಟದಲ್ಲಿರುವ ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ಛತ್ರದಲ್ಲಿ ಅತಿಥಿಗೃಹ ನಿರ್ಮಾಣ ಮಾಡಲು ಯಾವಾಗ ಉದ್ದೇಶಿಸಲಾಯಿತು ;

(ಆ) ಹಾಗಿದ್ದಲ್ಲಿ, ಎಷ್ಟು ಕೊಠಡಿಗಳ ನಿರ್ಮಾಣಕ್ಕೆ ಅನುಮತಿ ದೊರೆತಿದೆ ;

(ಇ) ಇದುವರೆವಿಗೂ ಪ್ರಾರಂಭ ಮಾಡದಿರಲು ಕಾರಣವೇನು ;

(ಈ) ಭಕ್ತಾದಿಗಳಿಗೆ ತೊಂದರೆ ಆಗುತ್ತಿರುವುದರಿಂದ ತೀವ್ರಗತಿಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆ ?

**ಹುಳಿಮಾವು ಸರ್ವೆ ನಂ. ೬೦/೧ ಪ್ರದೇಶದ ಭೂ ಸ್ವಾಧೀನ**

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೮೭೧ (೧೦೮೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹುಳಿಮಾವು ಗ್ರಾಮ ಸರ್ವೆ ನಂ. ೬೦/೧ ರ ಪ್ರದೇಶವನ್ನು ಯಾವಾಗ ಭೂಸ್ವಾಧೀನ ಮಾಡಿಕೊಳ್ಳಲಾಯಿತು; ವಿಸ್ತೀರ್ಣವೆಷ್ಟು;

(ಆ) ಯಾವ ಉದ್ದೇಶಕ್ಕೆ ಈ ಜಾಗವನ್ನು ಭೂಸ್ವಾಧೀನ ಮಾಡಿಕೊಳ್ಳಲಾಯಿತು ;

(ಇ) ಭೂ ಸ್ವಾಧೀನದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಹಾಗಿದ್ದಲ್ಲಿ, ಭೂಸ್ವಾಧೀನವಾಗಿದ್ದ ಈ ಜಾಗವನ್ನು ಕೈಬಿಡಲು ಶಿಫಾರಸ್ಸು ಮಾಡಿದವರು ಯಾರು; ಯಾವಾಗ ಕೈಬಿಡಲಾಯಿತು; ಕಾರಣವೇನು; (ವಿವರ ಕೊಡುವುದು)

(ಉ) ಮಂಜೂರಾತಿ ಸಮಿತಿಯು ತೆಗೆದುಕೊಂಡಿರುವ ಕ್ರಮಗಳೇನು? (ಪೂರ್ಣ ವಿವರ ಕೊಡುವುದು)

**Floor Area Ratio ನೀಡಲು ಪಾಲಿಕೆಯ ಮಾನದಂಡದ ಬಗ್ಗೆ**

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೮೭೨ (೧೦೮೭) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಹುಮಹಡಿ ಕಟ್ಟಡ ಕಟ್ಟಲು ಬಿಬಿಎಂಪಿ ಯಾವ ಆಧಾರದಲ್ಲಿ Floor Area Ratio ನಿಗದಿ ಮಾಡಲಿದೆ; ಮಾನದಂಡವೇನು;

(ಆ) ಹಾಗಿದ್ದಲ್ಲಿ, ಹುಳಿಮಾವು ಸರ್ವೆ ನಂ. ೬೦/೧ರ ಈ ಪ್ರದೇಶ ಯಾರಿಗೆ ಸೇರಿರುತ್ತದೆ; ಒಟ್ಟು ವಿಸ್ತೀರ್ಣ ಎಷ್ಟು;

(ಇ) ಈ ಜಾಗದಲ್ಲಿ ಬಹುಮಹಡಿ ಕಟ್ಟಡ ಕಟ್ಟಲು ಯಾರಿಗೆ ಅನುಮತಿ ನೀಡಲಾಗಿದೆ; ನಕ್ಷೆ ಯಾರ ಹೆಸರಿಗೆ ತಯಾರಾಗಿದೆ ;

(ಈ) ಈ ಜಾಗದ ಮಧ್ಯೆ ರಸ್ತೆ ಮಾಡಲಾಗಿದೆಯೆ; ಹಾಗಿದ್ದಲ್ಲಿ ವಿಭಜಿತವಾಗಿರುವ ಈ ಪ್ರದೇಶದ ವಿಸ್ತೀರ್ಣ ಎಷ್ಟು; ಅಥವಾ ಒಂದೇ ಖಾತಾ ಮಾಡಲಾಗಿದೆಯೇ;

(ಉ) ಈ ಜಾಗಕ್ಕೆ ಯಾವ ಆಧಾರದ ಮೇಲೆ Floor Area Ratio ನಿಗದಿ ಮಾಡಿ ಅನುಮತಿ ನೀಡಲಾಗಿದೆ; ಎಷ್ಟು ವಿಸ್ತೀರ್ಣಕ್ಕೆ Floor Area Ratio ನಿಗದಿ ಮಾಡಿಕೊಡಲಾಗಿದೆ;

(ಊ) ಅನುಮತಿ ನೀಡಿರುವ ಪ್ರಕಾರ ಕಟ್ಟಡ ನಿರ್ಮಾಣವಾಗುತ್ತಿದೆಯೆ? (ಪೂರ್ಣ ವಿವರ ಕೊಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅರ್ಕಾವತಿ ಯೋಜನೆ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೭೩ (೧೦೮೯) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅರ್ಕಾವತಿ ಬಡಾವಣೆ ರಚನೆಗೆ ಒಟ್ಟು ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು;

(ಆ) ನ್ಯಾಯಾಲಯದ ಆದೇಶದಂತೆ ಎಷ್ಟು ಎಕರೆ ಭೂಮಿಯನ್ನು ಭೂ ಸ್ವಾಧೀನದಿಂದ ಕೈಬಿಡಲಾಗಿದೆ; ಭೂಸ್ವಾಧೀನದಿಂದ ಕೈಬಿಡಲು ಪ್ರಾಧಿಕಾರದ ೩ ಜನ ಭೂಸ್ವಾಧೀನಾಧಿಕಾರಿಗಳು ನೀಡಿರುವ ಕಾರಣಗಳೇನು;

(ಇ) ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದ ಭೂ ಮಾಲೀಕರುಗಳ ವಿವರಗಳನ್ನು ನೀಡುವುದು; ಹಾಗೂ ಪ್ರಾಧಿಕಾರದ (ಮಂಡಳಿಯ) ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಲ್ಲಿ ವಿವರ ನೀಡುವುದು; ಇದಕ್ಕೆ ಸರ್ಕಾರದ ತೀರ್ಮಾನಗಳೇನು;

(ಈ) ಅರ್ಕಾವತಿ ಬಡಾವಣೆಯ ಅಭಿವೃದ್ಧಿಗಾಗಿ ಒಟ್ಟು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಅಭಿವೃದ್ಧಿ ಕಾರ್ಯ ಸಂಪೂರ್ಣಗೊಂಡಿದೆಯೇ; ಹಾಗಿದ್ದಲ್ಲಿ, ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಹಂಚಿಕೆಯಾದ ನಿವೇಶನಗಳ ವಿವರ ನೀಡುವುದು?

03378-4

## ಎಟಿಎಂ ನಲ್ಲಿ ನಡೆದ ಹತ್ಯೆ ಮತ್ತು ಭದ್ರತೆ/ಬೆಂಗಳೂರಿನ A.T.M ಗಳು

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) ಮತ್ತು ಶ್ರೀ ಇ.ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):-**

೮೭೪ (೧೧೯೦ + ೧೧೯೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಎಟಿಎಂನಲ್ಲಿ ನಡೆದ ಹತ್ಯೆ ಪ್ರಕರಣವನ್ನು ಪತ್ತೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; ಪ್ರಕರಣದ ಸಾಕ್ಷ್ಯ ಏನಾದರೂ ಇಲಾಖೆಗೆ ಲಭ್ಯವಾಗಿದೆಯೇ; ಇದರಲ್ಲಿ ಪೊಲೀಸರ ವೈಫಲ್ಯವಿರುವುದು ನಿಜವೇ;

(ಆ) ಈ ನಿಟ್ಟಿನಲ್ಲಿ ಬ್ಯಾಂಕ್ ಎಟಿಎಂ ಗಳಿಗೆ ಭದ್ರತೆ ನೀಡುವ ವಿಚಾರದಲ್ಲಿ ಸರ್ಕಾರದ ನಿಲುವೇನು; ಭದ್ರತೆ ವಿಚಾರವು ಆಯಾಯ ಬ್ಯಾಂಕ್‌ಗಳಿಗೆ ಬಿಡಲಾಗಿದೆಯೇ; ಬೆಂಗಳೂರು ನಗರದಲ್ಲಿರುವ ಒಟ್ಟು ಎಟಿಎಂ ಸಂಖ್ಯೆ ಎಷ್ಟು; ವಾರ್ಡ್‌ವಾರು ವಿವರ ನೀಡುವುದು;

(ಇ) ಎಟಿಎಂ ಭದ್ರತೆ ನೀಡುವ ವಿಚಾರ ಕಗ್ಗಂಟಾಗಿದೆಯೇ; ಹಾಗಿದ್ದಲ್ಲಿ, ಇದುವರೆಗಿನ ಪ್ರಗತಿ ವಿವರ ನೀಡುವುದು; ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಕ್ರಮಗಳೇನು;

(ಈ) ಎಟಿಎಂಗಳನ್ನು ರಾತ್ರಿ ವೇಳೆ ಮುಚ್ಚಿಸಲು ಕ್ರಮ ವಹಿಸಲಾಗುವುದೆ ಅಥವಾ ಅವರಿಗೆ ನೀಡುವ ನಿರ್ಧಿಷ್ಟ ಮಾರ್ಗಸೂಚಿಗಳೇನು;

(ಉ) ಸರ್ಕಾರದ ಕ್ರಮಕ್ಕೆ, ಮಾರ್ಗಸೂಚಿಗೆ ಬ್ಯಾಂಕ್‌ಗಳ ಆಡಳಿತ ಮಂಡಳಿಯವರು ಒಪ್ಪಿರುವರೆ ; (ತಿಳಿಸುವುದು)

(ಊ) ಬೆಂಗಳೂರಿನ A.T.M ಗಳಲ್ಲಿ ಹಣದೋಚಿರುವ ಪ್ರಕರಣಗಳೆಷ್ಟು; (ವಿವರ ನೀಡುವುದು)

(ಋ) ಇತ್ತೀಚೆಗೆ ಮಹಿಳಾ ಬ್ಯಾಂಕ್ ಉದ್ಯೋಗಿಯ ಮೇಲೆ A.T.M ನಲ್ಲಿ ನಡೆದ ಪ್ರಕರಣದಲ್ಲಿ ಇದುವರೆವಿಗೂ ಅಪರಾಧಿ ಪತ್ತೆ ಹಚ್ಚದಿರಲು ಕಾರಣವೇನು; (ವಿವರ ನೀಡುವುದು)

(ಎ) ಈ ಪ್ರಕರಣದ ವ್ಯಕ್ತಿಯ ಪತ್ತೆ ಕಾರ್ಯಕ್ಕೆ ಇನ್ನೂ ಎಷ್ಟು ಅವಧಿ ಬೇಕಾಗುತ್ತದೆ;

(ಏ) ಇಂತಹ ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಿ, ಕಠಿಣ ಶಿಕ್ಷೆ ವಿಧಿಸಲು ಸರ್ಕಾರ ಮುಂದಾಗುವುದೇ?

## ಕಾನೂನು ಸುವ್ಯವಸ್ಥೆ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೭೫ (೧೧೯೩) ಮಾನ್ಯ ಗೃಹ. ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ಮತ್ತು ಯಾದಗಿರಿ ನಗರಗಳ ವ್ಯಾಪ್ತಿಯಲ್ಲಿರುವ ಕಾನೂನು ಸುವ್ಯವಸ್ಥೆ ಮತ್ತು ಸಂಚಾರಿ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು;

(ಆ) ಈ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೊಸ ಠಾಣೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಈ ಜಿಲ್ಲೆಗಳ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು ?

## ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೭೬ (೧೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸರ್ಕಾರದಿಂದ ಅನುಮೋದಿಸಿರುವ ಯೋಜನೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಯೋಜನೆಗಳಲ್ಲಿ ಬಂಡವಾಳದ ಹೂಡಿಕೆ ಎಷ್ಟು; ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಿದ ಶೇಕಡಾವಾರು ಸಂಖ್ಯೆ ಎಷ್ಟು;

(ಇ) ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಜಾನುವಾರುಗಳ ಖಾಯಿಲೆಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೭೭ (೧೯೧) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ,ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಜಾನುವಾರುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಕಾಯಿಲೆಗಳು ಯಾವುವು; ಇವುಗಳ ಚಿಕಿತ್ಸೆಗಾಗಿ ಸರ್ಕಾರವು ಖರೀದಿಸುತ್ತಿರುವ ಔಷಧಿಗಳು ಯಾವುವು;

(ಆ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೆಚ್ಚು ಖಾಯಿಲೆಯಿಂದ ಜಾನುವಾರುಗಳು ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಶುವೈದ್ಯರ ತೀವ್ರ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ; ಕೊರತೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

**ಬೆಂಗಳೂರು ಕಾರಾಗೃಹದ ಅಧಿಕಾರಿಗಳು**

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೭೮ (೧೧೨೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜೈಲರ್‌ಗಳ ಸಂಖ್ಯೆ ಎಷ್ಟು;

(ಆ) ಸದರಿ ಜೈಲರ್‌ಗಳು ತಮ್ಮ ಸೇವಾವಧಿಯಲ್ಲಿ ಎಷ್ಟು ಬಾರಿ ಹಾಗೂ ಎಷ್ಟು ವರ್ಷ ಈ ಜೈಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ;

(ಇ) ೭–೮ ವರ್ಷಗಳಿಂದ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜೈಲರ್‌ಗಳ ಮೇಲೆ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದಾರೆಂದು ದೂರುಗಳಿದ್ದರೂ, ಅವರನ್ನು ಅಲ್ಲಿಯೇ ಮುಂದುವರೆಸಲು, ಅದೇ ಸ್ಥಳದಲ್ಲಿ ಬಡ್ತಿ ನೀಡುತ್ತಿರಲು ಕಾರಣವೇನು;

(ಈ) ಯಾವುದೇ ಹಿನ್ನೆಲೆ (ವೈದ್ಯಕೀಯ ಪತಿ/ಪತ್ನಿ) ಪ್ರಕರಣ ಇಲ್ಲದಿದ್ದರೂ ೭–೮ ವರ್ಷಗಳಿಂದ ಮುಂದುವರಿದಿದ್ದರೂ ವರ್ಗಾವಣೆ ನಿಯಮಗಳು ಸದರಿ ಸಿಬ್ಬಂದಿಗಳಿಗೆ ಅನ್ವಯವಾಗುವುದಿಲ್ಲವೇ?

## ಅನಧಿಕೃತ ಕಸಾಯಿಖಾನೆಗಳು

**ಶ್ರೀ ಎಂ.ಬಿ.ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೭೯ (೧೦೯೫) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪರವಾನಗಿ ಪಡೆದ ಕಸಾಯಿಖಾನೆಗಳ ಸಂಖ್ಯೆ ಎಷ್ಟು; (ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು)

(ಆ) ನಿಯಮಗಳನ್ನು ಪಾಲಿಸದೇ ಇರುವ ಕಸಾಯಿಖಾನೆಗಳಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು;

(ಈ) ಅನಧಿಕೃತ ಕಸಾಯಿಖಾನೆ ಬಗ್ಗೆ ಸರ್ಕಾರದ ನಿಲುವೇನು ?

## ಬಂದೀಖಾನೆ ಸ್ಥಳಾಂತರ ವಿಚಾರ

**ಶ್ರೀ ಎಂ.ಬಿ.ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೮೦ (೧೧೨೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ನಗರದಲ್ಲಿರುವ ಬಂದೀಖಾನೆಯನ್ನು ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

(ಆ) ಹಾಗಿದ್ದಲ್ಲಿ, ಸ್ಥಳಾಂತರ ಪ್ರಕ್ರಿಯೆ ಯಾವಾಗ ನಡೆಯುವುದು ;

(ಇ) ಈಗಿರುವ ಬಂದೀಖಾನೆಯ ಪ್ರದೇಶವನ್ನು ಸರ್ಕಾರ ಯಾವ ಉದ್ದೇಶಕ್ಕೆ ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ ? (ವಿವರ ನೀಡುವುದು)

## ಕೈಗಾರಿಕೆಗಳಿಗೆ ನೀಡುವ ಸಹಾಯಧನ

**ಶ್ರೀ ಎಂ.ಬಿ. ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೮೧ (೧೧೨೪) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಒಂದು ಕೈಗಾರಿಕೆಗೆ ಎಷ್ಟು ಬಾರಿ ಹಾಗೂ ಒಬ್ಬ ವ್ಯಕ್ತಿಗೆ ಎಷ್ಟು ಬಾರಿ ಸಹಾಯಧನ ಪಡೆಯಬಹುದು ;

(ಆ) ಒಂದೇ ಕೈಗಾರಿಕೆ ಹಲವು ಬಾರಿ ಅಥವಾ ಒಬ್ಬ ವ್ಯಕ್ತಿ ನಾನಾ ಮೂಲಗಳಿಂದ ಅಂದರೆ ಕೇಂದ್ರ (ಶೇ೨೫), ರಾಜ್ಯ (ಶೇ೨೫), ಹಾಗೂ ಇತರೆ ಸಂಸ್ಥೆಗಳಿಂದ (ಶೇ೨೫), ಸಹಾಯಧನ ಪಡೆಯಲು ಅವಕಾಶವಿದೆಯೇ;

(ಇ) ಒಬ್ಬ ವ್ಯಕ್ತಿ ಹೆಸರಿನಲ್ಲಿ ನಾನಾ ಕೈಗಾರಿಕೆಗಳನ್ನು ಮಾಡಿದಲ್ಲಿ ಅಷ್ಟು ಕೈಗಾರಿಕೆಗಳಿಗೆ ಸಹಾಯಧನ ಪಡೆಯಲು ಅರ್ಹನೇ;

(ಈ) ಒಂದೇ ಕೈಗಾರಿಕೆ ಹೆಸರಿನ (ಒಂದೇ ಸ್ಥಳದಲ್ಲಿರುವ) ಮೇಲೆ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿ ಪ್ರತ್ಯೇಕ ದಾಖಲೆಗಳ ಮೇಲೆ ಪದೇ ಪದೇ ಸಹಾಯಧನ ಪಡೆಯಬಹುದೇ; ಹಾಗೂ ಒಂದು ಕುಟುಂಬಕ್ಕೆ ಎಷ್ಟು ಜನರಿಗೆ ಎಷ್ಟು ಬಾರಿ ಸಹಾಯಧನ ನೀಡುವ ಅವಕಾಶವಿದೆ ;

(ಉ) ಸಹಾಯಧನ ಪಡೆಯುವಲ್ಲಿ ಹಾಗೂ ಮಂಜೂರು ಮಾಡುವಲ್ಲಿ ಕಾನೂನು/ನಿಯಮ ಉಲ್ಲಂಘನೆ ಮಾಡಿರುವವರ ವಿರುದ್ಧ ಸರ್ಕಾರ ಯಾವ ಶಿಸ್ತು ಕ್ರಮ ಕೈಗೊಂಡಿದೆ?

## ಅಕ್ರಮ ಗಣಿಗಾರಿಕೆ

**ಶ್ರೀ ಇ.ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೮೨ (೧೦೯೯) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಯಾವ ಯಾವ ಪ್ರದೇಶದಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಫಿಲ್ಟರ್ ಮರಳು ತಯಾರಿಕೆ ನಡೆಯುತ್ತಿದೆ; ಮರಳು ಗಣಿಗಾರಿಕೆಯಲ್ಲಿ ಸಂಭವಿಸಿರುವ ಅವಘಡಗಳು ಎಷ್ಟು; ಈ ಅವಘಡಗಳಲ್ಲಿ ಯಾವುದಾದರೂ ಮಾನವ ಜೀವಹಾನಿ ಸಂಭವಿಸಿದೆಯೇ; (ವಿವರ ಒದಗಿಸುವುದು)

(ಆ) ಅಕ್ರಮ ಮರಳು ಗಣಿಗಾರಿಕೆ ಮತ್ತು ಫಿಲ್ಟರ್ ಮರಳುಗಾರಿಕೆ ಮೇಲೆ ಎಷ್ಟು ಪ್ರಕರಣಗಳನ್ನು ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗಿದೆ; ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಿ ಬಿಡುಗಡೆ ಮಾಡಲಾಗಿದೆ; ಎಷ್ಟು ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ನಂತರ ಬಿಡುಗಡೆ ಮಾಡಲಾಗಿದೆ;

(ಇ) ನ್ಯಾಯಾಲಯದಲ್ಲಿ ಈ ಬಗ್ಗೆ ಯಾವುದಾದರೂ ಪ್ರಕರಣಗಳನ್ನು ದಾಖಲಿಸಲಾಗಿದೆಯೇ; ನೂತನ ಮರಳು ಗಣಿಗಾರಿಕೆ ನೀತಿಯನ್ನು ಯಾವಾಗ ಪ್ರಕಟಿಸಲಾಗುವುದು?

## ಬೆಂಗಳೂರು ನಗರದಲ್ಲಿ ರಸ್ತೆಯ ದುಸ್ಥಿತಿ

**ಶ್ರೀ ಇ.ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೮೩ (೧೧೯೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರದ ದೊಡ್ಡಬೀದರಕಲ್ಲು, ಕರಿಯೊಬನಹಳ್ಳಿ, ತಿಗಳರಪಾಳ್ಯ, ಪೀಣ್ಯ ಎರಡನೇ ಹಂತ, ಹೆಗ್ಗನಹಳ್ಳಿ ಮತ್ತು ಇತರೆ ಸ್ಥಳಗಳ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; ಬಂದಿದ್ದಲ್ಲಿ ವಿವರ ನೀಡುವುದು;

(ಆ) ಈ ಭಾಗದ ರಸ್ತೆ ಗುಂಡಿಗಳಿಂದಾಗಿ ಸಾರ್ವಜನಿಕರಿಗೆ ಸಂಚಾರದಲ್ಲಿ ತುಂಬಾ ಅಡಚಣೆಯಾಗುತ್ತಿರುವುದರ ಬಗ್ಗೆ ಸರ್ಕಾರದ ನಿಲುವೇನು;

(ಇ) ಈ ಭಾಗದ ರಸ್ತೆ ಗುಂಡಿಗಳನ್ನು ದುರಸ್ತಿಗೊಳಿಸಿ, ಉತ್ತಮ ರಸ್ತೆ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಉತ್ತಮ ಸಂಚಾರಕ್ಕೆ ಎಷ್ಟು ಸಮಯದಲ್ಲಿ ಕಾರ್ಯಗತಗೊಳಿಸಿಕೊಳ್ಳಲಾಗುವುದು ; (ವಿವರ ನೀಡುವುದು)

(ಈ) ಈ ಬಗ್ಗೆ ಸರ್ಕಾರ ಈಗಾಗಲೇ ಕೈಗೊಂಡ ಕ್ರಮವೇನು; ಹಾಗಿಲ್ಲದಿದ್ದಲ್ಲಿ, ಕೈಗೊಳ್ಳುವ ಕ್ರಮವೇನು ? (ವಿವರ ನೀಡುವುದು)

## ಪಶುವೈದ್ಯಕೀಯ ಆಸ್ಪತ್ರೆಗಳು

**ಶ್ರೀ ಇ.ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೮೪ (೧೧೦೦) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಖಾಲಿ ಇರತಕ್ಕ ಪಶು ವೈದ್ಯರು ಹಾಗೂ ಪಶುವೈದ್ಯಕೀಯ ಸಿಬ್ಬಂದಿಗಳ ಸಂಖ್ಯೆ ಎಷ್ಟು;

(ಆ) ಹೀಗೆ ಖಾಲಿಯಿರುವ ವೈದ್ಯರು ಮತ್ತು ಸಿಬ್ಬಂದಿಗಳನ್ನು ಕೂಡಲೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ;

(ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಅನಧಿಕೃತವಾಗಿ ದಾಸ್ತಾನು ಮಾಡಲಾಗಿದ್ದ ಮರಳು

**ಶ್ರೀ ಆರ್.ಕೆ.ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೮೫ (೧೧೦೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಚನ್ನಗಿರಿ ತಾಲ್ಲೂಕುಗಳನ್ನೊಳಗೊಂಡಂತೆ ಅನಧಿಕೃತವಾಗಿ ದಾಸ್ತಾನು ಮಾಡಲಾಗಿದ್ದ ಮರಳನ್ನು ಜಿಲ್ಲಾ ಉಸ್ತುವಾರಿ ಸಮಿತಿ ವಶಪಡಿಸಿಕೊಂಡಿದೆಯೇ;

(ಆ) ವಶಪಡಿಸಿಕೊಂಡಿದ್ದಲ್ಲಿ, ವಶಪಡಿಸಿಕೊಂಡ ಸ್ಥಳ ಹಾಗೂ ಮರಳಿನ ಪ್ರಮಾಣದ ಪೂರ್ಣ ವಿವರ ನೀಡುವುದು;

(ಇ) ವಶಪಡಿಸಿಕೊಂಡ ಮರಳನ್ನು ಯಾವ ರೀತಿ ಸಾರ್ವಜನಿಕ ಉಪಯೋಗಕ್ಕೆ ಹಂಚಿಕೆ ಅಥವಾ ಮಾರಾಟ ಮಾಡಲಾಗಿದೆ; (ಇದರ ಪೂರ್ಣ ವಿವರ ನೀಡುವುದು);

(ಈ) ಹಂಚಿಕೆ ಅಥವಾ ಮಾರಾಟ ಮಾಡುವಾಗ ಅನುಸರಿಸಲಾದ ಮಾನದಂಡವೇನು ? (ಸಂಪೂರ್ಣ ವಿವರ ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಗಳ ವಸತಿ ಯೋಜನೆಗಳು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೮೬ (೧೧೦೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಅವುಗಳು ತಮ್ಮ ವ್ಯಾಪ್ತಿಯಲ್ಲಿ ಒದಗಿಸಿಕೊಟ್ಟ ನಿವೇಶನಗಳ ವಿವರಗಳ ಪಟ್ಟಿ ನೀಡುವುದು ;

(ಆ) ಕಳೆದ ೩ ವರ್ಷಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ವಸತಿ ಕಾರ್ಯಕ್ರಮಗಳಿಗಾಗಿ ಯಾವ ಯಾವ ತಾಲ್ಲೂಕು ಮತ್ತು ಹೋಬಳಿಗಳಲ್ಲಿ ಕ್ಷೇತ್ರವಾರು ವಶಪಡಿಸಿಕೊಂಡ ಜಮೀನುಗಳೆಷ್ಟು; (ಪ್ರಾಧಿಕಾರವಾರು ವಿವರ ನೀಡುವುದು)

(ಇ) ಸದರಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸುವ ಮತ್ತು ಹಂಚಿಕೆ ಮಾಡುವ ದಿಸೆಯಲ್ಲಿ ಸಾಧಿಸಿದ ಪ್ರಗತಿಯೇನು; (ವಿವರ ನೀಡುವುದು) ;

(ಈ) ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ನಗರವಾಸಿಗರಿಗೆ ವಸತಿ ನಿವೇಶನಗಳನ್ನು ಒದಗಿಸುವ ಹಾಗೂ ಇತರ ಪೂರಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಸರ್ಕಾರದ ಕ್ರಮಗಳೇನು (ಮಾಹಿತಿ ನೀಡುವುದು) ?

**ಪಶುಸಂಗೋಪನೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ**

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೮೭ (೧೧೦೬) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಪಶುವೈದ್ಯಾಧಿಕಾರಿಗಳು ಹಾಗೂ ಎಲ್ಲಾ ವೃಂದದ ಹುದ್ದೆಗಳ ಒಟ್ಟು ನೌಕರರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಪಶು ಆಸ್ಪತ್ರೆವಾರು ಮಾಹಿತಿ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳನ್ನು ತುಂಬದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಆ ಹುದ್ದೆಗಳ ಭರ್ತಿಗೆ ತೆಗೆದುಕೊಂಡ ಕ್ರಮಗಳೇನು ?

## ಭಾರಿ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳು.

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೮೮ (೧೧೦೫) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಬೀದರ್ ಜಿಲ್ಲೆಯ ೬ ವಿಧಾನಸಭಾ ಕ್ಷೇತ್ರದಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ ವತಿಯಿಂದ ಅನುಷ್ಠಾನ ಮಾಡಿದ ಯೋಜನೆಗಳಾವುವು ; ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು (ಯೋಜನಾವಾರು ವಿವರ ನೀಡುವುದು) ;

(ಆ) ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳಾವುವು; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು; (ಯೋಜನಾವಾರು ವಿವರ ಒದಗಿಸುವುದು)

(ಇ) ಹೊಸ ಯೋಜನೆಗಳ ಪ್ರಸ್ತಾವನೆಗಳೇನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಜಿಲ್ಲೆಯ ಯಾವ ಕ್ಷೇತ್ರದಲ್ಲಿ ಪ್ರಸ್ತಾಪಗಳಿವೆ (ಇದ್ದರೆ ಆ ಕ್ಷೇತ್ರದ ವಿವರ ನೀಡುವುದು) ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳು

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೯೯ (೧೧೬೨) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲಾಗಿರುವ ಬಡಾವಣೆಗಳೆಷ್ಟು;

(ಆ) ೨೦೧೩-೧೪ನೇ ಸಾಲಿನಲ್ಲಿ ಬಿ.ಡಿ.ಎ ವತಿಯಿಂದ ಇದುವರೆಗೂ ಹಂಚಿಕೆಯಾಗಿರುವ ನಿವೇಶನಗಳೆಷ್ಟು; "ಡಿ" ನೋಟಿಫಿಕೇಶನ್ ಮಾಡಿರುವ ನಿವೇಶನಗಳೆಷ್ಟು ;

(ಇ) ೨೦೧೩-೧೪ನೇ ಸಾಲಿನಲ್ಲಿ ಬಿ.ಡಿ.ಎ ವಶಕ್ಕೆ ತೆಗೆದುಕೊಂಡಿರುವ ಜಮೀನುಗಳ ಬಡಾವಣೆಗಳು ಯಾವುವು; ಬಡಾವಣೆಗಳಲ್ಲಿ ಎಷ್ಟೆಷ್ಟು ಜಮೀನನ್ನು "ಡಿ" ನೋಟಿಫಿಕೇಶನ್ ಮಾಡಲಾಗಿದೆ; ಈ ಅವಧಿಯಲ್ಲಿ "ಡಿ" ನೋಟಿಫಿಕೇಶನ್ ಮಾಡಲಾದ ನಿವೇಶನಗಳ ಮಾಲೀಕರ ಹಾಗೂ ಜಮೀನುದಾರರ ಹೆಸರುಗಳನ್ನು ನೀಡುವುದು?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆ

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೯೦ (೧೧೬೦) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎರವಲು ಸೇವೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳೆಷ್ಟು ;

(ಆ) ಅಧಿಕಾರಿಗಳ ಹೆಸರು, ಪದನಾಮ ಮತ್ತು ಮೂಲ ಇಲಾಖೆ ಹಾಗೂ ಎಷ್ಟು ವರ್ಷಗಳಿಂದ ಎರವಲು ಸೇವೆಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ; (ವಿವರಗಳೊಂದಿಗೆ) ?

(ಇ) ಕಳೆದ ೩ ವರ್ಷಗಳಿಂದ ಹಾಗೂ ೩ ವರ್ಷಕ್ಕಿಂತ ಹೆಚ್ಚು ಅವಧಿ ಯಾವ ಯಾವ ಅಧಿಕಾರಿಗಳು/ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ? (ಹೆಸರು, ಪದನಾಮ ವಿವರ ನೀಡುವುದು)

## ರಾಜ ಕಾಲುವೆ ಕಾಮಗಾರಿ ನಿರ್ವಹಣೆ

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೯೧ (೧೧೦೭+೧೧೪೨) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ವಾರ್ಡ್ ನಂ.೬೯ರ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ ಪಕ್ಕದ ರಕ್ಕಸಿ ಹಳ್ಳದ ಮಳೆ ನೀರು ಕಾಲುವೆ ಕಾಮಗಾರಿಯನ್ನು ಯಾವ ಸಂಸ್ಥೆಗೆ ಎಷ್ಟು ಮೊತ್ತಕ್ಕೆ ಗುತ್ತಿಗೆ ನೀಡಲಾಗಿದೆ; ತೆರೆದ ಕಾಲುವೆ ಅಥವಾ ಬಾಕ್ಸ್ ಟೈಪ್ ಮುಚ್ಚಿದ ಕಾಲುವೆಗೆ ಮಂಜೂರು ಆಗಿದೆಯೇ; ಕಾಮಗಾರಿ ಪ್ರಾರಂಭ ಹಾಗೂ ಪೂರ್ಣಗೊಳಿಸಬೇಕಾದ ಅವಧಿ ತಿಳಿಸುವುದು;

(ಆ) ಸದರಿ ಸಂಸ್ಥೆ ಖುದ್ದಾಗಿ ಕಾಮಗಾರಿ ಮಾಡುತ್ತದೆಯೇ ಅಥವಾ ಉಪ ಗುತ್ತಿಗೆ ನೀಡಲಾಗುತ್ತಿದೆಯೇ; ಇವರು ಈ ಹಿಂದೆ ಮಾಡಿರುವ ಕಳಪೆ ಗುಣಮಟ್ಟದ ಎಷ್ಟು ಕಾಮಗಾರಿಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ;

(ಇ) ಮೇಲ್ಕಂಡ ಯೋಜನೆಯ ಯಾವ ಯಾವ ಕಾಮಗಾರಿಗಳಲ್ಲಿ ನಿರ್ವಹಿಸಬೇಕಾದ ಗುಣಮಟ್ಟದ ಪೂರ್ಣ ವಿವರ ಒದಗಿಸುವುದು;

(ಇ) ಕಾಮಗಾರಿ ಪರಿಶೀಲನೆ ಹಾಗೂ ಗುಣಮಟ್ಟ ಪರಿಶೀಲನಾ ಜವಾಬ್ದಾರಿಗಳ ಅಧಿಕಾರಿಗಳು ಯಾರ್‍ಯಾರು ? (ಸದರಿ ಕಾಮಗಾರಿಯ ಒಪ್ಪಂದದ ಪ್ರತಿ ಒದಗಿಸುವುದು)

## ಅಕ್ರಮ ನಿವೇಶನ ಮತ್ತು ಕಟ್ಟಡಗಳ ಸಕ್ರಮ

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು ) :-**

೮೯೨ (೧೧೦೮) ಮಾನ್ಯ ಮುಖ್ಯ ಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಂತಿಮ ಅಧಿಸೂಚನೆ ನಂತರವೂ ಅನಧಿಕೃತ ಸ್ವಾಧೀನದಲ್ಲಿದ್ದ ಯಾರ್‍ಯಾರ ಎಷ್ಟೆಷ್ಟು ನಿವೇಶನ ಕಟ್ಟಡ ಹಾಗೂ ಜಮೀನುಗಳನ್ನು ಕಳೆದ ೦೫ ವರ್ಷಗಳಿಂದ ಬಿ.ಡಿ.ಎ. ಕಾರ್ಯಾಚರಣೆ ನಡೆಸಿ ತನ್ನ ವಶಕ್ಕೆ ಪಡೆದಿದೆ;

(ಆ) ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.೪೩ರಲ್ಲಿನ ಜಾರಕ್ ಬಂಡೆ ಕಾವಲ್‌ನ ವಿವಿಧ ಸರ್ವೆ ನಂಬರ್‌ಗಳಲ್ಲಿನ ಬಿ.ಡಿ.ಎ. ಬಡಾವಣೆಯ ನಿವೇಶನ, ಕಟ್ಟಡ ಹಾಗೂ ಜಮೀನುಗಳ ಅನಧಿಕೃತ ಸ್ವಾಧೀನದಾರರಿಗೆ ಮಂಜೂರು ಮಾಡಲು ಸರ್ಕಾರ/ ಬಿ.ಡಿ.ಎ. ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿರುವಂತೆ, ಈಗಾಗಲೇ ತನ್ನ ವಶಕ್ಕೆ ಪಡೆದಿರುವ ಹಾಗೂ ಪಡೆಯಬೇಕಿರುವ ಇತರೆ ಪ್ರದೇಶಗಳ ಅನಧಿಕೃತ ನಿವಾಸಿಗಳ ನಿವೇಶನ ಕಟ್ಟಡ ಹಾಗೂ ಜಮೀನುಗಳನ್ನು ಅವರವರಿಗೆ ಪರಿಹಾರದೊಂದಿಗೆ ಹಿಂತಿರುಗಿಸಲು ಹಾಗೂ ಮಂಜೂರು ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; (ಪೂರ್ಣ ವಿವರ ಒದಗಿಸುವುದು);

(ಇ) ಇಲ್ಲದಿದ್ದಲ್ಲಿ, ಒಬ್ಬೊಬ್ಬ ನಾಗರೀಕರಿಗೆ ಒಂದೊಂದು ರೀತಿಯ ಕಾನೂನನ್ನು ಅನ್ವಯಿಸಿ ತಾರತಮ್ಯ ಮಾಡುವುದು ನಿಯಮ ಬಾಹಿರ ಹಾಗೂ ನ್ಯಾಯಾಲಯಗಳ ತೀರ್ಪಿಗೆ ವ್ಯತಿರಿಕ್ತವಾಗುವುದಿಲ್ಲವೇ ?

## ಪಶುಸಂಗೋಪನಾ ಯೋಜನೆಗಳು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೯೩ (೧೧೦೯) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾಂ ಜಿಲ್ಲೆಯಲ್ಲಿ ಪಶುಸಂಗೋಪನೆ ಇಲಾಖೆ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳಾವುವು; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು (ತಾಲ್ಲೂಕುವಾರು ಯೋಜನೆವಾರು ವಿವರ ಒದಗಿಸುವುದು) ;

(ಆ) ಜಿಲ್ಲೆಯಲ್ಲಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು; ಅವುಗಳ ರೂಪುರೇಷೆಗಳೇನು ;

(ಇ) ಜಿಲ್ಲೆಯಲ್ಲಿ ಇಲಾಖೆಗೆ ಹೊಸ ಪ್ರಸ್ತಾವಗಳೇನಾದರೂ ಬಂದಿದೆಯೇ; ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು (ವಿವರ ಒದಗಿಸುವುದು)?

## ಹೊಸ ಬಡಾವಣೆಗಳ ನಿರ್ಮಾಣ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೮೯೪ (೧೧೧೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳೆಯುತ್ತಿರುವ ನಗರಗಳಲ್ಲಿ ಒಂದಾದ ಬೆಳಗಾಂ ನಗರದಲ್ಲಿ ಹೊಸದಾಗಿ ಬಡಾವಣೆ ನಿರ್ಮಾಣ ಮಾಡುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ ;

(ಆ) ಇದ್ದಲ್ಲಿ, ಬೆಳಗಾಂ ನಗರಾಭಿವೃದ್ಧಿ ಪ್ರಾಧಿಕಾರ ಕಳೆದ ೧೦ ವರ್ಷಗಳಿಂದ ಯಾವುದೇ ಬಡಾವಣೆ ನಿರ್ಮಾಣ ಮಾಡದಿರಲು ಕಾರಣವೇನು ;

(ಇ) ಜನಸಂಖ್ಯೆಗೆ ತಕ್ಕಂತೆ ಹೊಸ ಬಡಾವಣೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು; ಸರ್ಕಾರಿ ಜಮೀನು ಲಭ್ಯವಿದೆಯೆ; ಇಲ್ಲದಿದ್ದಲ್ಲಿ, ಖಾಸಗಿ ಜಮೀನು ಖರೀದಿಸುವ ಯೋಚನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ?

**ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಶಾಲೆಗಳು**

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) :-**

೮೯೫ (೧೧೧೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಇವರುಗಳಲ್ಲಿ ಬಹುಪಾಲು ಎಷ್ಟು ಜನ ಬೋಧಕರು ಕಳೆದ ಐದು ವರ್ಷಗಳಿಂದ ಮತ್ತು ಅದಕ್ಕೂ ಮೇಲ್ಪಟ್ಟ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ; (ವಿವರ ನೀಡುವುದು)

(ಇ) ಅಗತ್ಯ ಸೇವೆಯಡಿಯಲ್ಲಿ ಬರುವ ಸದರಿ ಬೋಧಕರಿಗೆ ಸೇವಾ ಭದ್ರತೆ ನೀಡುವ ಬಗ್ಗೆ ಹಾಗೂ ಇವರುಗಳನ್ನು ಖಾಯಂಮಾತಿ ಮಾಡುವ ಬಗ್ಗೆ ಸರ್ಕಾರ ಭರವಸೆ ನೀಡುವುದೆ ?

## ಯುವತಿಯರು ಕಾಣೆಯಾಗುತ್ತಿರುವುದು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೯೬ (೧೧೧೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಯುವತಿಯರು ಕಾಣೆಯಾಗುತ್ತಿರುವ ಪ್ರಕರಣಗಳು ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರವೂ ಸೇರಿದಂತೆ ರಾಜ್ಯದಲ್ಲಿ ಕಾಣೆಯಾದ ಯುವತಿಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಕಾಣೆಯಾದ ಯುವತಿಯರ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ; ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚುವ ಪ್ರಗತಿಯು ನಿಧಾನವಾಗುತ್ತಿರುವ ಬಗ್ಗೆ ಸರ್ಕಾರದ ಗಮನ ಹರಿಸಿದೆಯೇ;

(ಈ) ತ್ವರಿತ ತನಿಖೆ ಮತ್ತು ಪತ್ತೆ ಹಚ್ಚುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು)

(ಉ) ಪತ್ತೆ ಹಚ್ಚಿದ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದೆ? (ವಿವರ ಒದಗಿಸುವುದು)

## ಮುಜರಾಯಿ ದೇವಸ್ಥಾನಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೯೭ (೧೧೫೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ಒಟ್ಟು ದೇವಸ್ಥಾನಗಳು ಎಷ್ಟು; ಅಂತಹ ದೇವಸ್ಥಾನಗಳಿಂದ ಬೊಕ್ಕಸಕ್ಕೆ ಬರತಕ್ಕಂತಹ ಆದಾಯವೆಷ್ಟು;

(ಆ) ಇಲ್ಲಿಯವರೆಗೆ ರಾಜ್ಯದಲ್ಲಿ ಇರುವ ನೋಂದಾಯಿತ ಹಾಗೂ ನೋಂದಾಯಿತವಲ್ಲದ ದೇವಸ್ಥಾನಗಳು ಎಷ್ಟು; ಅಂತಹ ದೇವಸ್ಥಾನಗಳಿಗೆ ಕಳೆದ ಸಾಲಿನಲ್ಲಿ ನೋಂದಾಯಿತ ಹಾಗೂ ನೋಂದಾಯಿತವಲ್ಲದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಮಾಡಲು ಇರುವ ಸರ್ಕಾರದ ಮಾನದಂಡಗಳೇನು?

## ಕಲಬೆರಕೆ ಹಾಲು ಸರಬರಾಜು

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೯೮ (೧೧೧೪) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಹಾಗೂ ಹೊರ ರಾಜ್ಯದಿಂದ ಕಲಬೆರಕೆ ಹಾಲು ಸರಬರಾಜು ಆಗುತ್ತಿರುವುದು ನಿಜವೇ;

(ಆ) ಹಾಗಿದ್ದಲ್ಲಿ ಕಲಬೆರಕೆ ಹಾಲು ಸರಬರಾಜು ಮಾಡುತ್ತಿರುವ ರಾಜ್ಯ ಮತ್ತು ಹೊರ ರಾಜ್ಯಗಳ ಕಂಪನಿ/ಕಾರ್ಖಾನೆಗಳನ್ನು ಗುರುತಿಸಲಾಗಿದೆಯೇ;

(ಇ) ಗುರುತಿಸಲಾಗಿದ್ದರೆ, ಅವುಗಳು ಯಾವುವು ಪೂರ್ಣ ಮಾಹಿತಿ ನೀಡುವುದು;

(ಈ) ಕಲಬೆರಕೆ ಹಾಲು ಸರಬರಾಜು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಉ) ಕಲಬೆರಕೆ ಹಾಲನ್ನು ಉತ್ಪತ್ತಿ ಮಾಡುವ ರಾಜ್ಯ/ಹೊರ ರಾಜ್ಯ ಕಂಪನಿಗಳ ಮೇಲೆ ದಾಳಿ ಮಾಡಲಾಗಿದೆಯೇ; ಮಾಡಿದ್ದರೆ, ಎಷ್ಟು ಕಂಪನಿ/ಕಾರ್ಖಾನೆಗಳ ಮೇಲೆ ಇದುವರೆವಿಗೂ ದಾಳಿ ಮಾಡಿ ಲಾಕ್‌ಔಟ್ ಮಾಡಲಾಗಿದೆ; (ಪೂರ್ಣ ಮಾಹಿತಿ ನೀಡುವುದು) ;

(ಊ) ಇಂತಹ ಕಂಪನಿಗಳ/ಕಾರ್ಖಾನೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ಪೂರ್ಣ ಮಾಹಿತಿ ನೀಡುವುದು ?

## ಬೆಟ್ಟಿಂಗ್ ದಂಧೆಯನ್ನು ತಡೆಗಟ್ಟುವುದು

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೮೯ (೧೧೧೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬೆಟ್ಟಿಂಗ್ ದಂಧೆಗೆ ಬಲಿಯಾದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಬೆಟ್ಟಿಂಗ್ ದಂಧೆಗೆ ಮಕ್ಕಳೇ ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಬೆಟ್ಟಿಂಗ್ ದಂಧೆಯನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)

## ಬೆಂಗಳೂರು ನಗರದ ಸುರಂಗ ಮಾರ್ಗಗಳಲ್ಲಿ ಅನೈತಿಕ ಚಟುವಟಿಕೆಗಳು

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೦೦ (೧೧೧೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಸುರಂಗ ಮಾರ್ಗಗಳಲ್ಲಿ ಅನೈತಿಕ ಅಕ್ರಮ ಚಟುವಟಿಕೆಗಳಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಂತಹ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಪಾದಚಾರಿಗಳು ಸುರಂಗ ಮಾರ್ಗದಲ್ಲಿ ನೆಮ್ಮದಿಯಿಂದ ಓಡಾಡಲು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು?

## ರೇಷ್ಮೆ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೦೧ (೧೧೧೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೇಷ್ಮೆ ಇಲಾಖೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇಲ್ಲದೇ ಇಲಾಖೆಯ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ರೇಷ್ಮೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಸದರಿ ಇಲಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳು ಎಷ್ಟು; ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು; ಇನ್ನೂ ಬೇಕಾಗಿರುವ ಹುದ್ದೆಗಳು ಯಾವುವು? (ಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)

## ರೇಷ್ಮೆ ಬೆಳೆ ಕಡಿಮೆಯಾಗುತ್ತಿರುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೬೦೨ (೧೧೧೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇತ್ತೀಚಿನ ದಿನಗಳಲ್ಲಿ ರೈತರು ಕಡಿಮೆ ರೇಷ್ಮೆ ಬೆಳೆಯನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ರೈತರು ಹೆಚ್ಚು ರೇಷ್ಮೆ ಬೆಳೆಯಲು ಉತ್ತೇಜನ ನೀಡುವ ಬಗ್ಗೆ ಯಾವುದಾದರು ಹೊಸ ಯೋಜನೆಗಳನ್ನು ಸರ್ಕಾರ ರೂಪಿಸಲು ಕ್ರಮ ಕೈಗೊಂಡಿದೆಯೇ? (ಪೂರ್ಣ ಮಾಹಿತಿ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ ಒತ್ತುವರಿ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :-**

೯೦೩ (೧೧೨೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರುವ ಆಸ್ತಿಯನ್ನು ಭೂಗಳ್ಳರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಒತ್ತುವರಿಯನ್ನು ತೆರವುಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿರುವ ಕ್ರಮಗಳೇನು; ಇಂತಹ ಎಷ್ಟು ಪ್ರಕರಣಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ದಾಖಲಾಗಿರುತ್ತವೆ; ಹಾಗೂ ದಾಖಲಾಗಿರುವ ಪ್ರಕರಣಗಳಲ್ಲಿ ಕೈಗೊಂಡಿರುವ ಕ್ರಮಗಳೇನು?

## ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :-**

೯೦೪ (೧೧೨೧) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಕೀಲರ ಸಂಖ್ಯೆ ಎಷ್ಟು;

(ಆ) ಪ್ರತಿ ಸರ್ಕಾರಿ ವಕೀಲರಿಗೆ ಹಂಚಿಕೆಯಾಗಿರುವ ಪ್ರಕರಣಗಳೆಷ್ಟು;

(ಇ) ಇದುವರೆಗೆ ಈ ವಕೀಲರು ನಡೆಸಿದಂತಹ ಪ್ರಕರಣಗಳಲ್ಲಿ ಸರ್ಕಾರ ಪರ ಹಾಗೂ ವಿರುದ್ಧ ಹೊರ ಬಂದಿರುವ ಆದೇಶಗಳೆಷ್ಟು;

(ಈ) ಇದಕ್ಕಾಗಿ ಸರ್ಕಾರ ಇದುವರೆಗೆ ವ್ಯಯಿಸಿದ ವೆಚ್ಚವೆಷ್ಟು? (ವಕೀಲರವಾರು ವಿವರ ನೀಡುವುದು)

## ಪಶು ವೈದ್ಯಕೀಯ ಆಸ್ಪತ್ರೆಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :-**

೯೦೫ (೧೧೨೦) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹಾಲಿ ಇರುವ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು;

(ಆ) ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಆಸ್ಪತ್ರೆಗಳೆಷ್ಟು;

(ಇ) ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಈ ಇಲಾಖೆಗೆ ಕಳೆದ ೫ ವರ್ಷಗಳಿಂದ ಬಿಡುಗಡೆಯಾದ ಮೊತ್ತವೆಷ್ಟು?

## ಕಟ್ಟಡ ಕುಸಿತ ಮತ್ತು ಜಾಹೀರಾತು ಫಲಕ

**ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು):-**

೯೦೬ (೧೧೨೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳಪೆ ಕಟ್ಟಡ ಕುಸಿತದಿಂದ ಹಾಗೂ ಕಟ್ಟಡ ನಿರ್ಮಾಣ ಹಂತದಲ್ಲಿ ಸತ್ತವರ ಸಂಖ್ಯೆ ಎಷ್ಟು; ಇದರಲ್ಲಿ ಸರ್ಕಾರಿ ಕಟ್ಟಡಗಳು ಎಷ್ಟು; ಖಾಸಗಿ ಕಟ್ಟಡಗಳು ಎಷ್ಟು; ಕಟ್ಟಡಗಳ ಕುಸಿತಕ್ಕೆ ಕಾರಣವೇನು; ಕಟ್ಟಡ ಕುಸಿತ ಹಾಗೂ ಇದರಿಂದ ಸಾವಿಗೆ ಕಾರಣರಾದವರ ಮೇಲೆ ಜರುಗಿಸಿರುವ ಕ್ರಮವೇನು;

(ಆ) ಸತ್ತ ಕುಟುಂಬಗಳಿಗೆ ಪರಿಹಾರ ಯಾವ ರೂಪದಲ್ಲಿ ನೀಡಲಾಗಿದೆ; ಸರ್ಕಾರದಿಂದ ನೀಡಿರುವ ತಲಾ ಪರಿಹಾರವೆಷ್ಟು;

(ಇ) ಕುಸಿದು ಅನಾಹುತಕ್ಕೆ ಕಾರಣವಾದ ಕಟ್ಟಡಗಳು ಹಾಗೂ ನಿರ್ಮಾಣ ಹಂತದ ಕಟ್ಟಡಗಳಲ್ಲಿ ಬಿ.ಬಿ.ಎಂ.ಪಿ. ಯಿಂದ ನಕ್ಷೆ ಮಂಜೂರಾಗಿದ್ದ ಅಧಿಕೃತ ಕಟ್ಟಡಗಳು ಎಷ್ಟು; ಮತ್ತು ಅನಧಿಕೃತ ಕಟ್ಟಡಗಳು ಎಷ್ಟು;

(ಈ) ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿದ್ದರೆ, ಇದಕ್ಕೆ ಅನುಮತಿ ನೀಡಿದ ಅಥವಾ ಸಂಬಂಧಿಸಿದ ಅಧಿಕಾರಿಗಳ ಜವಾಬ್ದಾರಿ ಏನು; ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮವೇನು;

(ಉ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಅಧಿಕೃತ ಜಾಹಿರಾತು ಫಲಕಗಳು ಎಷ್ಟು; ಇದರಿಂದ ಎಷ್ಟು ಆದಾಯ ಸಂಗ್ರಹವಾಗಬೇಕಿದೆ; ಎಷ್ಟು ಸಂಗ್ರಹವಾಗಿದೆ; ಎಷ್ಟು ಹಣ ಬಾಕಿ ಇದೆ; ಬಾಕಿ ವಸೂಲಿಗೆ ತೆಗೆದುಕೊಂಡ ಕ್ರಮವೇನು; ಅನಧಿಕೃತ ಜಾಹೀರಾತು ಫಲಕಗಳು ಎಷ್ಟಿವೆ; ಇದರಿಂದ ಎಷ್ಟು ಆದಾಯ ಬಂದಿದೆ; ಬಾಕಿ ಎಷ್ಟು?

## ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೦೭ (೧೧೨೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಇತ್ತೀಚೆಗೆ ಸೇರ್ಪಡೆಗೊಂಡ ಹೊಸ ವಾರ್ಡ್‌ಗಳಲ್ಲಿರುವ ಜನರಿಗೆ ಕುಡಿಯಲು ನೀರು ಒದಗಿಸಲು ಬೆಂಗಳೂರು ಜಲಮಂಡಳಿಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

(ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ ಎಷ್ಟು ಪ್ರದೇಶಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡಬೇಕಾಗಿದೆ; ಈಗಾಗಲೇ ಸರಬರಾಜು ಮಾಡಿರುವ ಪ್ರದೇಶಗಳೆಷ್ಟು;

(ಇ) ಅಕ್ರಮ ಸಕ್ರಮ ಇನ್ನೂ ಜಾರಿಯಾಗದೇ ಇರುವುದರಿಂದ ಆ ಪ್ರದೇಶಗಳ ನಾಗರೀಕರಿಗೆ ನೀರು ಸರಬರಾಜು ಮಾಡಲು ಯಾವ

ರೀತಿ ಶುಲ್ಕವನ್ನು ವಿಧಿಸಲಾಗುತ್ತಿದೆ; ಹೀಗೆ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಿಗೆ ಕಾರ್ಯಗಳನ್ನು ನಿರ್ವಹಿಸಲು ಹೆಚ್ಚಿನ ಉದ್ಯೋಗಿಗಳನ್ನು ನಿಯೋಜಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

## ಕಸದಿಂದ ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದನೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೯೦೮ (೧೧೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಸದ ವಿಲೇವಾರಿ ಮಾಫಿಯಾದ ಹಿಡಿತಕ್ಕೆ ಸಿಲುಕಿ ಕಗ್ಗಂಟಾಗಿದ್ದು, ಸುಂದರ ಉದ್ಯಾನನಗರಿ ಎಂದು ವಿಶ್ವಖ್ಯಾತಿ ಹೊಂದಿದ್ದ ಬೆಂಗಳೂರು ಮಹಾನಗರಿ "ಕಸದ ತೊಟ್ಟಿ" ಯಾಗಿ ರೋಗ-ರುಜಿನಗಳನ್ನು ಹಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ನಿಯಂತ್ರಿಸಲು ಸರ್ಕಾರವು ಯುದ್ಧೋಪಾದಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೆ;

(ಇ) ಕಸವನ್ನು ತಿಪ್ಪೆಗೆ ಹಾಕದೇ, ಅದೊಂದು ಸಂಪನ್ಮೂಲವೆಂದು ಸದ್ಬಳಕೆ ಮಾಡಿ, ಸ್ವೀಡನ್ ದೇಶದ ಮಾದರಿಯಲ್ಲಿ, ತ್ಯಾಜ್ಯವನ್ನೆಲ್ಲ ವಿವಿಧ ರೀತಿಯಲ್ಲಿ ಪುನರ್ ಬಳಕೆ ಮಾಡುವಂತಹ ಯೋಜನೆಗಳನ್ನು ರೂಪಿಸಿ ಪ್ರತಿ ವಾರ್ಡ್‌ನಲ್ಲಿ ಕಸದಿಂದ ವಿದ್ಯುತ್-ರಸಗೊಬ್ಬರ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಿ ಬೆಂಗಳೂರಿನ ಸೌಂದರ್ಯವನ್ನು ಹೆಚ್ಚಿಸಲಾಗುವುದೆ?

## ಹೊಸಪೇಟೆ-ಬಳ್ಳಾರಿ ನಡುವೆ ಬೈಪಾಸ್ ರಸ್ತೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೯೦೯ (೧೧೩೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೊಸಪೇಟೆ ನಗರವು ರಾಷ್ಟ್ರೀಯ ಪ್ರವಾಸಿ ಕೇಂದ್ರ ಮತ್ತು ಕೈಗಾರಿಕಾ ಪ್ರದೇಶವಾಗಿ ಬೃಹತ್ ಪರಿವರ್ತನೆಗೊಂಡಿದ್ದು, ಅಧಿಕ ವಾಹನಗಳ ಸಂಚಾರದಿಂದ ಜನದಟ್ಟಣೆ ಉಂಟಾಗಿ ಸುಲಭ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಭಾರಿ ವಾಹನಗಳ ಚಲಾವಣೆಗಾಗಿ ಹೊಸಪೇಟೆ-ಬಳ್ಳಾರಿ ನಡುವೆ ಬೈಪಾಸ್ ರಸ್ತೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ;

(ಇ) ನಗರದಲ್ಲಿ ಪ್ರವಾಸಿಗರ ಮತ್ತು ಸಾರ್ವಜನಿಕರ ಸುಲಭ ಸಂಚಾರದ ದೃಷ್ಟಿಯಿಂದ ಉದ್ದೇಶಿತ ಬೈಪಾಸ್ ರಸ್ತೆ ನಿರ್ಮಿಸುವುದು ಯಾವಾಗ; ಇದರ ಚಾಲನೆಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೆ (ವಿವರ ನೀಡುವುದು)?

## ಹೆಚ್.ಕೆ.ಆರ್.ಡಿ.ಬಿ. ರಚನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೯೧೦ (೧೧೩೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಿರುವ ಹಿನ್ನೆಲೆಯಲ್ಲಿ "ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಎಚ್‌ಕೆಆರ್‌ಡಿಬಿ) ರಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಮಂಡಳಿ ಅಸ್ತಿತ್ವಕ್ಕೆ ಬಂದ ನಂತರ ಮಂಡಳಿ ಸರ್ವಸದಸ್ಯರ ಸಭೆ (ಮಂಡಳಿಯ ಸದಸ್ಯರ ಸಲಹಾ ಸಮಿತಿ ಸಭೆ) ನಡೆಸಲಾಗಿದೆಯೇ; ಎಷ್ಟು ಸಭೆಗಳನ್ನು ನಡೆಸಲಾಗಿದೆ ಮತ್ತು ಯಾವಾಗ (ವಿವರಿಸುವುದು) ;

(ಇ) ೨೦೧೩-೧೪ನೇ ಸಾಲಿನಲ್ಲಿ ಈ ಮಂಡಳಿಗೆ ೧೫೦ ಕೋಟಿ ರೂ. ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಲ್ಲಿ ಬಿಡುಗಡೆಯಾದ ಹಣವೆಷ್ಟು;

(ಈ) ಈ ಅನುದಾನ ಬಳಕೆ ಮಾಡುವುದಕ್ಕಾಗಿ ಮಂಡಳಿಯ ಪ್ರಥಮ ಸಭೆಯಲ್ಲಿ ೧೫೦ ಕೋಟಿ ರೂ. ಕ್ರಿಯಾ ಯೋಜನೆ ರೂಪಿಸಿ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲಾಗಿದೆಯೇ; ಯಾವಾಗ ಸಲ್ಲಿಸಲಾಗಿದೆ ಮತ್ತು ಅನುಮೋದನೆ ದೊರೆತಿದ್ದು, ಯಾವಾಗ; (ವಿವರ ನೀಡುವುದು)

(ಉ) ರಾಜ್ಯಪಾಲರಿಂದ ಅನುಮೋದನೆಯಾದ ಕ್ರಿಯಾ ಯೋಜನೆ ಅನುಷ್ಠಾನಗೊಂಡಿದೆಯೇ (ಜಿಲ್ಲಾವಾರು ಸಂಪೂರ್ಣ ಮಾಹಿತಿ ಒದಗಿಸುವುದು)?

## ಅಕ್ರಮ ಮರಳು ಸಾಗಾಣಿಕೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೯೧೧ (೧೧೩೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹಗಲು ರಾತ್ರಿಯೆನ್ನದೆ ಸರ್ಕಾರಿ ಅಧಿಕಾರಿಗಳ

ಸಮ್ಮುಖದಲ್ಲಿ ರಾಜಾರೋಷವಾಗಿ ಮರಳು ದಂಧೆ ನಡೆಯುತ್ತಿದ್ದರೂ ಸರ್ಕಾರ ಕಣ್ಣು ಮುಚ್ಚಿ ಕುಳಿತುಕೊಳ್ಳಲು ಕಾರಣವೇನು (ವಿವರಣೆ ನೀಡುವುದು);

(ಆ) ಅಕ್ರಮ ಮರಳು ಸಾಗಾಣಿಕೆ ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು; ಇದಕ್ಕೆ ಪ್ರತ್ಯೇಕವಾಗಿ ಮರಳು ನೀತಿ ರೂಪಿಸಲಾಗಿದೆಯೇ (ವಿವರಣೆ ನೀಡುವುದು);

(ಇ) ಸರ್ಕಾರದ ಅನುಮತಿಯ ಮೇರೆಗೆ ಮರಳು ಸಾಗಾಣಿಕೆ ಮಾಡಲು ಇರುವ ಮಾನದಂಡಗಳೇನು (ಸಮಗ್ರ ಮಾಹಿತಿ ನೀಡುವುದು)?

## ದೇಶೀಯ ತಳಿಯ ಹೈನುಗಾರಿಕೆಗೆ ಉತ್ತೇಜನ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೧೨ (೧೧೪೪) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪಶುಸಂಗೋಪನಾ ಇಲಾಖೆಯಿಂದ ಹೈನುಗಾರಿಕೆಗೆ ಉತ್ತೇಜನ ನೀಡುವ ವಿದೇಶಿ ತಳಿಯಾದ ಅತೆಜ್, ವಪ್ ಜರ್ಸಿ ಮುಂತಾದ (ವಿದೇಶಿ) ತಳಿಗಳಿಗೆ ಆದ್ಯತೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ವಿದೇಶಿ ತಳಿಗಳು ರಾಜ್ಯದ ವಾತಾವರಣಕ್ಕೆ ಹೊಂದಿಕೊಳ್ಳದೆ ಕಾಯಿಲೆಗಳು ಹೆಚ್ಚಾಗುತ್ತಿರುವುದನ್ನು ಗಮನಿಸಿ, ವಿದೇಶಿ ತಳಿಯ

ಬದಲಿಗೆ ವಿದೇಶಿ ತಳಿಗಳ ಹಾಲನ್ನು ಉತ್ಪಾದಿಸುವ ಶಕ್ತಿಯುಳ್ಳ ತಳಿಗಳಿಗೆ ಉತ್ತೇಜನ ನೀಡಲು ಸರ್ಕಾರಕ್ಕಿರುವ ತೊಂದರೆಯೇನು (ಪೂರ್ಣ ವಿವರ ನೀಡುವುದು);

(ಇ) ವಿದೇಶಿ ತಳಿಯ ಬದಲಿಗೆ ದೇಶಿಯ ತಳಿಯ ಹೈನುಗಾರಿಕೆಗೆ ಉತ್ತೇಜನ ನೀಡಲು ಸರ್ಕಾರ ಏನು ಕ್ರಮಕೈಗೊಳ್ಳಲಿದೆ (ಪೂರ್ಣ ವಿವರ ನೀಡುವುದು) ?

## ಗ್ರಾಮ ಪಂಚಾಯಿತಿಯಲ್ಲೊಂದು ಪಶುಸಂಗೋಪನಾ ಆಸ್ಪತ್ರೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೧೩ (೧೧೪೫) ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಶುಸಂಗೋಪನಾ ಆಸ್ಪತ್ರೆಗಳಿದೆಯೇ (ಪೂರ್ಣ ವಿವರ ನೀಡುವುದು);

(ಆ) ಇಲ್ಲದಿದ್ದಲ್ಲಿ, ಪ್ರತಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲೊಂದು ಪಶುಸಂಗೋಪನಾ ಆಸ್ಪತ್ರೆ ತೆರೆಯಲು ಸರ್ಕಾರಕ್ಕಿರುವ ತೊಂದರೆಯೇನು;

(ಇ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ? (ಪೂರ್ಣ ವಿವರ ನೀಡುವುದು)

## ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ವಿಸ್ತರಣಾಧಿಕಾರಿಗಳ ಕಛೇರಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೧೪ (೧೧೪೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೈಗಾರಿಕಾ ವಿಸ್ತರಣಾಧಿಕಾರಿಗಳ ಕಛೇರಿ ಮತ್ತು ವಿಸ್ತರಣಾಧಿಕಾರಿಯ ಹುದ್ದೆ ಯಾವ ಯಾವ ತಾಲ್ಲೂಕಿನಲ್ಲಿದೆ (ಜಿಲ್ಲಾವಾರು, ತಾಲ್ಲೂಕುವಾರು, ಕಛೇರಿವಾರು, ಹುದ್ದೆವಾರು ಪೂರ್ಣ ವಿವರ ನೀಡುವುದು);

(ಆ) ಹಾಗಿದ್ದಲ್ಲಿ, ಕೆಲವು ತಾಲ್ಲೂಕು ಕಛೇರಿಗಳಲ್ಲಿ ಕೈಗಾರಿಕಾ ವಿಸ್ತರಣಾಧಿಕಾರಿಯ ಕಛೇರಿ ತೆರೆಯಲು ಮತ್ತು ಹುದ್ದೆಗಳನ್ನು ನೇಮಿಸಲು ಸರ್ಕಾರಕ್ಕಿರುವ ತೊಂದರೆಯೇನು;

(ಇ) ಪ್ರತಿ ತಾಲ್ಲೂಕು ಮಟ್ಟದಲ್ಲಿ ಕಛೇರಿ ಮತ್ತು ಹುದ್ದೆ ಸೃಜಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ? (ವಿವರ ನೀಡುವುದು)

## ಪೊಲೀಸ್ ವಸತಿ ಗೃಹ ಸ್ಥಾಪನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೧೫ (೧೧೪೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಯಾವ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪೊಲೀಸ್ ವಸತಿ ಗೃಹಗಳಿವೆ ಮತ್ತು ಅವುಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆಯೇ (ತಾಲ್ಲೂಕುವಾರು, ಜಿಲ್ಲಾವಾರು ಪೂರ್ಣ ವಿವರ ನೀಡುವುದು);

(ಆ) ಯಾವ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪೊಲೀಸ್ ವಸತಿ ಗೃಹಗಳಿರುವುದಿಲ್ಲ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು);

(ಇ) ಇಲ್ಲದಿರುವ ಸ್ಥಳಗಳಲ್ಲಿ ಪೊಲೀಸ್ ವಸತಿಗೃಹಗಳನ್ನು ಸ್ಥಾಪಿಸಿ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು)?

## ಲಿಫ್ಟ್ ನಿರ್ವಹಣೆಯಲ್ಲಿನ ಲೋಪದೋಷಗಳು

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೯೧೬. (೧೧೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಅಳವಡಿಕೆಯಾಗಿರಬಹುದಾದ ಲಿಫ್ಟ್‌ಗಳ ಅಂದಾಜು ಇದೆಯೇ; ಹಾಗಿದ್ದಲ್ಲಿ, ಸರ್ಕಾರಿ ಖಾಸಗಿ ಕಟ್ಟಡಗಳ ಮತ್ತು ಅಪಾರ್ಟ್‌ಮೆಂಟ್‌ಗಳ ಪ್ರತ್ಯೇಕ ಮಾಹಿತಿ ಒದಗಿಸುವುದು;

(ಆ) ಕಳೆದ ೫ ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಲಿಫ್ಟ್ ತೊಂದರೆಗೆ ಸಿಲುಕಿಗೊಂಡ ದುರಂತ ಪ್ರಕರಣಗಳು ಎಷ್ಟು; ಇವುಗಳಲ್ಲಿ ಗಾಯಗೊಂಡ ಮತ್ತು ಪ್ರಾಣ ಕಳೆದುಕೊಂಡವರ ಸಂಖ್ಯೆ ಎಷ್ಟು; ಇಂತಹ ಪ್ರಕರಣಗಳಿಗೆ ಕಾರಣವಾದ ಅಂಶಗಳ ಮೇರೆಗೆ ಯಾರ ಮೇಲೆ ಕ್ರಮಗಳನ್ನು ಕೈಗೊಳ್ಳಲಾಗಿದೆ (ಪ್ರತ್ಯೇಕವಾದ ಪೂರ್ಣ ಮಾಹಿತಿ ಒದಗಿಸುವುದು)

(ಇ) ಲಿಫ್ಟ್ ಅಳವಡಿಕೆಗೆ, ನಿರ್ವಹಣೆಗೆ ಪ್ರತ್ಯೇಕ ಕಾಯ್ದೆಯಿದ್ದರೂ ಸಹ ನಿರ್ವಹಣೆಯ ಕೊರತೆಯಿಂದಾಗಿಯೇ ಮತ್ತು ಪರವಾನಿಗೆ ನವೀಕರಣದಲ್ಲಿನ ಲೋಪದೋಷಗಳೂ ಸಹ ಇಂತಹ ದುರಂತಕ್ಕೆ ಕಾರಣವಾಗುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು (ಮಾಹಿತಿ ನೀಡುವುದು) ?

## ಅಕ್ರಮ ನೀರು ಸಂಪರ್ಕ ಮತ್ತು ನೀರು ಪೋಲು

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು)** :–

೯೧೭ (೧೧೫೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಅಕ್ರಮ ನೀರು ಸಂಪರ್ಕ ಪಡೆದಿರುವ ನಲ್ಲಿಗಳ ಅಂದಾಜು ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ, ಈ ಅಕ್ರಮ ಸಂಪರ್ಕದಿಂದಾಗಿ ವಾರ್ಷಿಕ ಜಲಮಂಡಳಿ ಅನುಭವಿಸುತ್ತಿರುವ ನಷ್ಟವೆಷ್ಟು; (ಕಳೆದ ೫ ವರ್ಷಗಳ ಪ್ರತ್ಯೇಕ ಮಾಹಿತಿ ಒದಗಿಸುವುದು);

(ಆ) ಬೆಂಗಳೂರು ನಗರಕ್ಕೆ ಪ್ರಸ್ತುತ ಸರಬರಾಜು ಆಗುತ್ತಿರುವ ನೀರಿನ ಪ್ರಮಾಣ ಎಷ್ಟು; ಸಂಗ್ರಹಿಸಲಾಗುತ್ತಿರುವ ನೀರಿನ ತೆರಿಗೆ ಹಾಗೂ

ವಿವಿಧ ಕಾರಣಗಳಿಗಾಗಿ ಪೋಲಾಗುತ್ತಿರುವ ನೀರಿನ ಪ್ರಮಾಣ ಎಷ್ಟು; ಕಳೆದ ೫ ವರ್ಷಗಳ ಅವಧಿಯ ವರ್ಷಾವಾರು ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು;

(ಇ) ಜಲಮಂಡಳಿಯಲ್ಲಿ ವಿವಿಧ ಅಕ್ರಮಗಳಿಗೆ ಕಾರಣಕರ್ತರಾದ ಅಧಿಕಾರಿ, ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಆಯಾ ಅಧಿಕಾರಿ, ಸಿಬ್ಬಂದಿ ಮತ್ತು ಆಗಿರುವ ನಷ್ಟದ ಅಂದಾಜು ಕುರಿತ ಪ್ರತ್ಯೇಕ ಮಾಹಿತಿ ಒದಗಿಸುವುದು;

(ಈ) ಅಕ್ರಮ ನೀರು ಸಂಪರ್ಕ ನಲ್ಲಿಗಳನ್ನು ತೆರವುಗೊಳಿಸುವ ಮತ್ತು ಅಗಾಧ ಪ್ರಮಾಣದಲ್ಲಿ ಆಗುತ್ತಿರುವ ನೀರು ಪೋಲು ಪ್ರಕರಣಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ (ಹಾಗಿದ್ದಲ್ಲಿ ಕೈಗೊಂಡ ಕ್ರಮದ ಮಾಹಿತಿ ಒದಗಿಸುವುದು)?

## ಪಾರ್ಕಿಂಗ್ ಸಮಸ್ಯೆ ಮತ್ತು ಅಕ್ರಮ ತಡೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೯೧೮ (೧೧೫೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಬೆಂಗಳೂರು ನಗರದಲ್ಲಿ ವಾಹನಗಳ ಪಾರ್ಕಿಂಗ್‌ಗಾಗಿ ನಿಗದಿಪಡಿಸಿರುವ ಜಾಗಗಳು ಯಾವುವು; ಇವುಗಳಲ್ಲಿ ಉಚಿತ ಮತ್ತು ಶುಲ್ಕ ಪಾವತಿ ಪಾರ್ಕಿಂಗ್ ಸ್ಥಳಗಳು ಯಾವುವು (ವಿವರ ಒದಗಿಸುವುದು);

(ಆ) ಬಿ.ಬಿ.ಎಂ.ಪಿ.ಯ ಖಾಲಿ ಜಾಗಗಳನ್ನು ಖಾಸಗಿಯವರು ಅಕ್ರಮ ಪಾರ್ಕಿಂಗ್ ಸ್ಥಳಗಳನ್ನಾಗಿಸಿ ಶುಲ್ಕ ವಸೂಲು ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು;

(ಇ) ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳೂ ಸೇರಿದಂತೆ ಹಲವು ಜನನಿಬಿಡ ರಸ್ತೆಗಳಲ್ಲಿ ವಾಹನಗಳ ಪಾರ್ಕಿಂಗ್‌ಗಾಗಿ ಸ್ಥಳವಕಾಶ ಕೊರತೆಯಿಂದ ನಾಗರೀಕರು ಅನುಭವಿಸುತ್ತಿರುವ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಸ್ಥಳಾವಕಾಶ ಹೆಚ್ಚಿಸಿ, ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಆಲೋಚನೆಯೇನು (ಮಾಹಿತಿ ಒದಗಿಸುವುದು)?

## ಸಂಚಾರ ನಿಯಂತ್ರಣ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೧೯ (೧೧೫೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆ, ಜಮಖಂಡಿ ಪಟ್ಟಣದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು ಪ್ರತಿ ದಿನ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಏನು ಕ್ರಮ ಜರುಗಿಸಲಾಗುವುದು;

(ಆ) ಬೆಳಗಿನ ವೇಳೆ ಟ್ರಕ್ ಮತ್ತು ಭಾರಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗುವುದೇ;

(ಇ) ಜಮಖಂಡಿ ನಗರಕ್ಕೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾತಿ ಪ್ರಕ್ರಿಯೆ ಸರಕಾರದ ಮುಂದೆ ಇದೆಯೇ; ಇದ್ದರೆ ಯಾವಾಗ ಮಂಜೂರು ಮಾಡಲಾಗುವುದು?

## ಅಕ್ರಮ ಗಣಿಗಾರಿಕೆ

**ಶ್ರೀ ನಾರಾಯಣಸಾ ಕೆ. ಬಾಂಡಗೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೯೨೦ (೧೧೫೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕರ್ನಾಟಕ ಲೋಕಾಯುಕ್ತರು ಇತ್ತೀಚೆಗೆ ಅಕ್ರಮ ಗಣಿಗಾರಿಕೆಯ ಮೇಲೆ ದಾಳಿ ನಡೆಸಿದ ಸಮಯದಲ್ಲಿ ತಿಳಿಸಲಾದ ಈ ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದವರ ಮಾಲೀಕರ ಹಾಗೂ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ; (ಅಕ್ರಮ ಗಣಿಗಾರಿಕೆ ಸ್ಥಳ, ಮಾಲೀಕರ ಹೆಸರು ಹಾಗೂ ಅಧಿಕಾರಿಗಳ ವಿವರ ತಿಳಿಸುವುದು);

(ಇ) ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಹೊಸ ಕೈಗಾರಿಕೆಗಳ ಸ್ಥಾಪನೆಯ ಪ್ರಸ್ತಾವನೆಗಳು

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೯೨೧ (೧೧೫೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿವಿಧೆಡೆ ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸ್ಥಾಪಿಸಲು, ಹೊರರಾಜ್ಯ ಹಾಗೂ ವಿದೇಶಗಳಿಂದ ಕಳೆದ ೫ ವರ್ಷಗಳಲ್ಲಿ ಬಂದಿರುವ ಪ್ರಸ್ತಾವನೆಗಳು ಎಷ್ಟು (ವರ್ಷವಾರು ವಿವರ ಒದಗಿಸುವುದು);

(ಆ) ಇದರಲ್ಲಿ ಅನುಷ್ಠಾನಗೊಂಡಿರುವ ಯೋಜನೆಗಳು ಎಷ್ಟು (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸುವ ಕೆರೆಗಳು

**ಶ್ರೀ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು) :-**

೯೨೨ (೧೧೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಅಸ್ತಿತ್ವದಲ್ಲಿದೆಯೇ; ಇದ್ದಲ್ಲಿ, ಅಭಿವೃದ್ಧಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು; ಅವುಗಳ ಹೆಸರು ಮತ್ತು ಖರ್ಚು ಮಾಡಿರುವ ಹಣದ ವಿವರ ನೀಡುವುದು; ಹಾಗೂ ಏನೇನು ಅಭಿವೃದ್ಧಿಪಡಿಸಲಾಗಿದೆ (ವಿವರಗಳನ್ನು ನೀಡುವುದು);

(ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆ ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎಷ್ಟು ಹಣ ನೀಡಿವೆ; ಇದರ ಅಭಿವೃದ್ಧಿಗೆ ಖರ್ಚು ಮಾಡಿರುವ ಹಣಕ್ಕೆ ಲೆಕ್ಕ ಇದೆಯೇ; ಬಿಲ್ಲುಗಳನ್ನು ನೀಡಿದ್ದಾರೆಯೇ; ಕೆರೆಗಳು ಅಭಿವೃದ್ಧಿ ಆಗಿದೆಯೇ; ಇವುಗಳಿಂದ ಆಗಿರುವ ಪ್ರಯೋಜನ ಎಷ್ಟು;

(ಇ) ಈ ಕೆರೆಗಳನ್ನು ಅಭಿವೃದ್ಧಿಪಡಿಸದೇ ಬಿಲ್ಲುಗಳನ್ನು ನೀಡಿ ಹಣ ಕ್ಲೈಮ್ ಮಾಡಿರುವುದು ನಿಜವೇ; ಇದ್ದಲ್ಲಿ "ಕೆರೆಗಳ ಅಭಿವೃದ್ಧಿ" ಎಂದು ಎಷ್ಟು ಬೋಗಸ್ ಬಿಲ್ ನೀಡಲಾಗಿದೆ; (ಸಮಗ್ರ ವಿವರಗಳನ್ನು ನೀಡುವುದು) ಹೌದಾದಲ್ಲಿ, ಸಂಬಂಧಪಟ್ಟವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೇ (ವಿವರ ನೀಡುವುದು)?

**ಪಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03378/1000 ಪ್ರತಿಗಳು/08-07-2014